ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೩, ಸಂಚಿಕೆ ೧೨, ಮೇ ೨೦೧೬

ಕನ್ನಡಕ್ಕೆ ಜೋಡಿಸಿ ಕೈ ಕನ್ನಡಗೊಳಿರೈ

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಸಿಡ್ನಿ ಸುದ್ದಿಗಳು ... ಪು. ೨

ಚಿಲುಮೆಯ ಒಳಗೆ

ಚಾಣಕ್ಯ ನೀತಿ ಮತ್ತು ರಾಜಕೀಯ ... ಪು. ೬

ರಾಂ ರಾಮ ... ಪು. ೮

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ... ಪು. ೧೨

ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೩

ಚಿಲುಮೆಯ ಒಳಗೆ

ಪದಪುಂಜ/ರಂಗೋಲಿ ... ಪು. ೧೪

ಶಾಯರಿ ... ಪು. ೧೫

ಚಿಲುಮೆಯ ಒಳಗೆ

ಮಳೆ (ಕಥೆ) ... ಪು. ೧೬

ವಿಜ್ಞಾನ , ಅಲ್ಲಲ್ಲಿ ಏನೇನು ... ಪು. ೨೦

ವೈ.ಕೆ.ಸಂಧ್ಯಾಶರ್ಮ ಅವರು ಬರೆದಿರುವ ಕಥೆ - ಮಳೆ

ಪುಟ ೧೬

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಜನರೆಲ್ಲರೂ ಒಟ್ಟುಗೂಡಿ ಮಾಡಿದ ಕೆಲಸಕ್ಕೂ, "ನಾನೊಬ್ಬನೇ ಎಲ್ಲವನ್ನೂ ಮಾಡುವೆ" ಎಂದು ನಿರ್ವಹಿಸುವ ಕಾರ್ಯಕ್ಕೂ ಇರುವ ಮುಖ್ಯ ವ್ಯತ್ಯಾಸವೆಂದರೆ, ಸಂಘದಲ್ಲಿ ಕಾಣುವ ಆನಂದ. ಒಬ್ಬನೇ ಮಾಡಿದಾಗ, ಅಬ್ಬಬ್ಬ ಎಂದರೆ ತನಗೆ ಸಂತೋಷವಾಗಬಹುದು. ಅದೂ ಸಾಫಲ್ಯ ಸಿಕ್ಕರೆ ಮಾತ್ರ. ಪ್ರಯತ್ನವು ಫಲಪ್ರದವಾಗದಿದ್ದಾಗ ಕೊರಗುವುದೇ ಹೆಚ್ಚು. ಆದರೆ, ಎಲ್ಲರನ್ನೂ ಸೇರಿಸಿಕೊಂಡು ಮಾಡುವ ಸಂಘದ ಕೆಲಸದಲ್ಲಿ ಭಾಗವಹಿಸುವರೆಲ್ಲರೂ ಹಬ್ಬದ ವಾತಾವರಣದಲ್ಲಿ ಭಾಗಿಯಾಗಿ ಸಂತೋಷವನ್ನು ಹಂಚಿಕೊಂಡು, ಒಟ್ಟುಗೂಡಿ ನಲಿವನ್ನು ಕಾಣುತ್ತಾರೆ. ಸಾಫಲ್ಯತೆಗಿಂತ ಭಾಗವಹಿಸುವುದು ಅಲ್ಲಿ ಮುಖ್ಯವೆನಿಸುತ್ತದೆ.

ನಿರ್ದಿಷ್ಟ ಪರಿಣತಿಯ ಕೆಲಸಗಳನ್ನು ಬಿಟ್ಟರೆ, ಹೆಚ್ಚಾಗಿ ಸಾಫಲ್ಯ ಕಾಣುವುದು ಈ ಸಂಘಟಿತ ಕ್ಷೇತ್ರದಲ್ಲೇ. ತನಗೇನು ಚೆನ್ನಾಗಿ ಮಾಡಲು ಬರುತ್ತದೆಯೋ, ಅದನ್ನು ಸಂಘಟನೆಯಲ್ಲಿ ಧಾರೆಯೆರೆದಾಗ, ಇತರರ ಪರಿಣತಿಯ ಕೆಲಸಗಳ ಜೊತೆಗೆ ಒಟ್ಟಾರೆಯಾಗಿ ಸಮ್ಮಿಲನಗೊಂಡು ಮಾಡುತ್ತಿರುವ ಕಾರ್ಯವು ಜನಮನ್ನಣೆ ಪಡೆಯುತ್ತದೆ.

ನಿಮಗೆ ತಿಳಿದಿರುವಂತೆ, ಮೂರು ವರ್ಷಗಳ ಮುಂಚೆ, ಆಸ್ಟ್ರೇಲಿಯಾ ಕನ್ನಡಿಗರು ವಿಶ್ವ ಕನ್ನಡಿಗರಿಗಾಗಿ ಹೊರತಂದ ಈ ವಿಶಿಷ್ಟ ಇ-ಮಾಸಪತ್ರಿಕೆಯಾದ ಹೊರನಾಡ ಚೆಲುಮೆಯು, ಇಂದು ಜಗದಾದ್ಯಂತ ಅನೇಕ ಕನ್ನಡಿಗರನ್ನು ತಲುಪುತ್ತಿದೆ. ಓದುಗರಿಗೆ ತಮ್ಮ ತಮ್ಮ ಪರಿಣತಿಯ ಸಾಹಿತ್ಯರಸವನ್ನು ಉಣಬಡಿಸಲು, ಸ್ಥಳೀಯ ಪ್ರತಿಭೆಗಳ ಜೊತೆಗೆ, ಖ್ಯಾತ ಅಂಕಣಕಾರರೂ ನಮ್ಮ ಕೈ ಜೋಡಿಸಿದ್ದಾರೆ. ನಿರಂತರವಾಗಿ ಸಾಹಿತ್ಯದ ಈ ಚೆಲುಮೆಯನ್ನು ನಿಮಗೆ ತಲುಪಿಸುತ್ತಿರುವುದು ಸಂಪಾದಕೀಯ ಮಂಡಳಿಗೆ ಸಂತಸದ ವಿಷಯವಾಗಿದೆ. ಇವೆಲ್ಲವೂ ಒಬ್ಬರ ಬಲವಲ್ಲ. ಹಲವಾರು ನುರಿತ ಕೈಗಳ ಸಮೂಹ ಬಲ.

ಮೊದಲ ಸಂಚಿಕೆಯಲ್ಲಿ ಈ ಹಿರಿನುಡಿಯನ್ನು ಮುಖಪುಟದಲ್ಲಿ ಪ್ರಕಟಿಸಿದ್ದೆವು. "ಜೀವನದಲ್ಲಿ ನೀನೊಬ್ಬನೇ ಏನಾದರೂ ಸಾಧಿಸಿ ಮೇಲೆ ಬರುವುದಕ್ಕಿಂತ, ಹತ್ತು ಜನರನ್ನು ಮೇಲೆ ತಂದರೆ ಅದಕ್ಕಿಂತ ದೊಡ್ಡ ಸಾಧನೆ ಬೇರೊಂದಿಲ್ಲ". ಇದು ಸದಾ ಕಾಲಕ್ಕೂ ಪ್ರಸ್ತುತವಾದ ಶ್ರೇಷ್ಠ ನುಡಿಯೆಂದು ನಮ್ಮ ಅಭಿಮತ.

ಬನ್ನಿ ನಾವೆಲ್ಲರೂ ಕನ್ನಡಿಗರಾಗಿ ಒಟ್ಟು ಸೇರಿ ನಡೆಯೋಣ. ಸಾಹಿತ್ಯವು ನಮ್ಮ ಮೂಲ ಅನ್ನವಾಗಲಿ. ಕನ್ನಡವೆಂಬ ಚೆನ್ನದ ತಟ್ಟೆಯಲ್ಲಿ ರಸದೌತಣ ಮಾಡುತ್ತಾ ಸವಿಯೋಣ. ಆನಂದ ಪಡೋಣ. ▪

ಎರಡು ತಿಂಗಳ ಪ್ರಮುಖ ದಿನಗಳು

ಮೇ ಶ್ರೀ ದುರ್ಮುಖ ನಾಮ ಸಂವತ್ಸರ,
ಉತ್ತರಾಯಣ, ವಸಂತ ಋತು, ಚೈತ್ರ/ ವೈಶಾಖ ಮಾಸ

03 ಮಂ - ವರೂಥಿನಿ ಏಕಾದಶಿ
05 ಗು ಷದ್-ಎ-ಮೀರಜ್
06 ಶು – ಅಮಾವಾಸ್ಯೆ
07 ಶ - ವೈಷಾಖ ಮಾಸ ಆರಂಭ, 08 ಭಾ - ಮದರ್ಸ್ ಡೆ
09 ಸೋ - ಅಕ್ಷಯ ತದಿಗೆ, ಬಸವ ಜಯಂತಿ
10 ಮಂ - ರಾಮಾನುಜಾಚಾರ್ಯರ ಜಯಂತಿ
11 ಬು - ಶಂಕರ ಜಯಂತಿ
17 ಮಂ - ಮೋಹಿನೀ ಏಕಾದಶಿ
20 ಶು - ನೃಸಿಂಹ ಜಯಂತಿ
21 ಶ - ಹುಣ್ಣಿಮೆ/ಬುದ್ಧ ಪೂರ್ಣಿಮಾ
23 ಸೋ - ಷಬ್-ಎ-ಬರಾತ್/ನಾರದ ಜಯಂತಿ
25 ಬು - ಸಂಕಷ್ಟ ಚತುರ್ಥಿ

ಜೂನ್ ಶ್ರೀ ದುರ್ಮುಖಿ ನಾಮ ಸಂವತ್ಸರ,
ಉತ್ತರಾಯಣ/ದಕ್ಷಿಣಾಯಣ, ವಸಂತ/ಗ್ರೀಷ್ಮ ಋತು, ವೈಶಾಖ/ಜ್ಯೇಷ್ಠ ಮಾಸ

01 ಬು - ಅಪರಾ ಏಕಾದಶಿ
4/5 ಬಾದಾಮಿ ಅಮಾವಾಸ್ಯೆ
06 ಸೋ - ಜ್ಯೇಷ್ಠ ಮಾಸ ಆರಂಭ
07 ಮಂ - ರಂಜಾನ್ ಉಪವಾಸ ಆರಂಭ
16 ಗು - ನಿರ್ಜಲ ಏಕಾದಶಿ
20 ಸೋ - ಕಾರ ಹುಣ್ಣಿಮೆ, ವಟ ಸಾವಿತ್ರಿ ವ್ರತ
23 ಗು - ಸಂಕಷ್ಟ ಚತುರ್ಥಿ
30 ಗು – ಯೋಗಿನಿ ಏಕಾದಶಿ

ಸಿಡ್ನಿಯಲ್ಲಿ ಯುಗಾದಿ ಕಾರ್ಯಕ್ರಮ - ವರದಿ

ರಾಜಲಕ್ಷ್ಮಿ ನಾರಾಯಣ

ಏಪ್ರಿಲ್ ೨೩ ಸಂಜೆ ಸಿಡ್ನಿಯಲ್ಲಿ ಎಲ್ಲೆಲ್ಲೂ ಕಾರ್ಯಕ್ರಮಗಳ ಸುದ್ದಿಯೋ ಸುದ್ದಿ, ಕೆಲವರಿಗೆ ಎರಡು ಮೂರುಕಡೆ ಆಹ್ವಾನ. ಹೀಗಿರುವಾಗ ಸಿಡ್ನಿ ಕನ್ನಡಶಾಲೆಯ ಯುಗಾದಿ ಹಬ್ಬ ಕಾರ್ಯಕ್ರಮಕ್ಕೆ ಜನ ಬರುತ್ತಾರಾ? ಎನ್ನುವ ಚಿಂತೆಯಲ್ಲೇ ಇದ್ದ ನಮಗೆ ಒಂದು ಅಚ್ಚರಿ ಕಾದಿತ್ತು. ನಿರೀಕ್ಷೆಗೂ ಮೀರಿದ ಜನ ಸಮಯಕ್ಕೆ ಸರಿಯಾಗಿ ಬಂದ ಕಾರಣವೋ ಕಾಣೆ ಕಾರ್ಯಕ್ರಮವೂ ೬ಕ್ಕೆ ಸರಿಯಾಗೇ ನಾಂದಿಯಾಯಿತು. ಶ್ರೀಯುತ ರಾಮ ಕುಡುವ ಅವರು ದೀಪಬೆಳಗುವುದರಿಂದ ಶುರುವಾದ ಕಾರ್ಯಕ್ರಮ ಐದು ವಿವಿಧ ರೀತಿಯ ಭಾಗವಾಗಿತ್ತು. ಪುಟ್ಟ ಮಕ್ಕಳ ಶಿಶುಗೀತೆಗಳಿಂದ ಅರಂಭಗೊಂಡು ಕು|ಅನೀಶ "ಗಜವದನ ಬೇಡುವೆ" ಹಾಡಿದರೆ, ಕು|ಸಾನಿಕಾ ಕ್ಲಿಷ್ಟವಾದ "ಭೋಶಂಭೋ" ಹಾಡಿದಳು, ಕು|ನಿತ್ಯ ತೊದಲು ನುಡಿಗಳಿಂದ ಮುದ್ದುಮುದ್ದಾಗಿ "ಹಚ್ಚೇವು ಕನ್ನದದ ದೀಪಾ" ಹಾಡಿದಳು. ಚಿ|ಸ್ಕಂದ ಭಗವದ್ಗೀತೆಯ ಭಾವಾರ್ಥ ಕೊಡುವ ಕನ್ನಡದ ಹಾಡು, ನಾಲ್ಕಾರು ನುಡಿಗಳನ್ನು ಸರಾಗ ಮತ್ತು ಸ್ಪಷ್ಟವಾಗಿ ಹಾಡಿ ಎಲ್ಲರಮೆಚ್ಚುಗೆಗಳಿಸಿದನು. ಮಕ್ಕಳ ಈ ಭಾಗವನ್ನು ಕು|ನಿತ್ಯರಾವ್ ಅಚ್ಚುಕಟ್ಟಾಗಿ ನಡೆಸಿಕೊಟ್ಟಳು.

ಶ್ರೀಮತಿ ಪರಿಮಳ ರಂಗನಾಥ್ ನಿರ್ವಹಣೆ ಮಾಡಿದ"ಕನಕ ನಮನ" ಈ ದಿನ ಹೈಲೈಟ್ ಎನ್ನಬಹುದು. ಕುಮಾರಿಯರಾದ ನಿರೀಕ್ಷ, ಸಿಂಧು ಮತ್ತು ಆಸ್ತಾ ಸೊಗಸಾದ ಆರು ವಿವಿಧ ದಾಸ ಸಾಹಿತ್ಯದ ಕೀರ್ತನೆಗಳನ್ನು ಹಾಡಿದರು. ಕು| ನಿರೀಕ್ಷ ಭಟ್ ಜಗನ್ನಾಥ ವಿಠಲ ದಾಸ ವಿರಚಿತ "ಎದ್ದುಬರುತಾರೆ ನೋಡೆ ಎದ್ದು ಬರುತಾರೆ" ಮತ್ತು ಮಂತ್ರಾಲಯದೊಳು ರಾಜಿಪನ್ಯಾರೆ – ಕಮಲೇಶ ವಿಠಲ ದಾಸರ ರಚನೆ ಹಾಡಿದರೆ, ಕು|ಸಿಂಧು ನಾರಾಯಣ "ಶರಣು ಗಜಮುಖ ಆಖುವಾಹನ" - ವಿಜಯ ದಾಸರ ರಚನೆ ಮತ್ತು "ಸತ್ಯವಂತರ ಸಂಗವಿರಲು" - ಕನಕ ದಾಸರ ರಚನೆ ಹಾಡಿದಳು. ಕು| ಆಸ್ತಾ ದೇಸಾಯಿ "ದಾಸನಾಗು ವಿಶೇಷನಾಗು"- ಕನಕದಾಸರ ರಚನೆ ಮತ್ತು "ಗಾನ ಲೋಲನಾದ ಶ್ರೀನಿವಾಸನ" - ಹನುಮೇಶ ದಾಸರ ರಚನೆ ಹಾಡಿ ಎಲ್ಲರ ಮೆಚ್ಚುಗೆ ಪಡೆದರು. ಮೂರೂ ಮಕ್ಕಳು ಬೇರೆ ಬೇರೆ ಶೈಲಿಯಲ್ಲಿ ಹಾಡಿದ್ದೂ ಒಂದು ವಿಶೇಷ. ಶ್ರೀಮತಿ ಪರಿಮಳ ಹಾಡುಗಳ ಮೊದಲು ನೀಡಿದ ವಿವರಣೆ ಮಾಹಿತಿ ತುಂಬಾ ಸೊಗಸಾಗಿತ್ತು.

ಕೆ.ಎಸ್.ನ. ನಮನ ಶ್ರೀನಿವಾಸ್ ಮತ್ತು ತಂಡದವರು ನಡೆಸಿಕೊಟ್ಟ ಮತ್ತೊಂದು ಕಾರ್ಯಕ್ರಮ. ಶ್ರೀಮತಿ ವೀಣಾ ಸುದರ್ಶನ್ ನಿರ್ವಹಣೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಶ್ರೀ ಶ್ರೀನಿವಾಸ್, ಶ್ರೀಮತಿ ಸೋನಿಯಾ ಮತ್ತು ಶ್ರೀಮತಿ ವರ್ಷಾ ಅವರುಗಳು ನರಸಿಂಹ ಸ್ವಾಮಿ ಅವರ ಇಂಪಾದ ಹಾಡು ಹಾಡಿ ಸಭಿಕರ ಮನತಣಿಸಿದರು. ಅವರ ಸಮೂಹ ಗಾನ "ಒಂದಿರುಳು ಕನಸಿನಲಿ" ಹಾಡಿಗೆ ಚಪ್ಪಾಳೆ ಜತೆಗೂಡಿಸಿದರು ಸೇರಿದ್ದ ಜನ. ಕು|ಸಿರಿ ಹಾಡಿದ "ದೀಪವು ನಿನ್ನದೆ" ಕೆ ಎಸ್ ನರಸಿಂಹಸ್ವಾಮಿಗಳ ಕವಿತ್ವ ಆರದಿರಲಿ ಬೆಳಕು ಎಂಬ ಅರ್ಥಕ್ಕೆ ಒಳ್ಳೆಯ ನ್ಯಾಯ ಒದಗಿಸಿತು. ಬಹಳ ಸೊಗಸಾಗಿ ಮೂಡಿ ಬಂದಿತು ಸಿರಿ ಹಾಡಿದ ಹಾಡು. ಶ್ರೀಮತಿ ವೀಣಾ ಕೆ.ಎಸ್.ನ ಬಗ್ಗೆ ನೀಡಿದ ವಿವರಣೆಯಲ್ಲಿ ತುಂಬಾ ಆಸಕ್ತವಾದ ಮಾಹಿತಿಗಳಾಗಿದ್ದವು.

ಕನ್ನಡ ಶಾಲೆಯ ಮಕ್ಕಳು ಕುಣಿದು ಜನಮನ ತಣಿಸಿದ ಮತ್ತೊಂದು ಕಾರ್ಯಕ್ರಮದ ಭಾಗ ನೃತ್ಯಗಳು. ಬಹುತೇಕ ಸಿನಿಮಾ ಹಾಡುಗಳೆ ಆದರೂ, ಆ ಮಕ್ಕಳ ಕಣ್ ಕೊರೈಸುವ ವೇಷ ಭೂಷಣ ತಾಳಕ್ಕೆ ತಕ್ಕಂತೆ ಅಲ್ಲಲ್ಲಿ ತಪ್ಪಿದರೂ ಅದನ್ನು ನೋಡುವುದೇ ಚೆನ್ನ. ಡ್ಯಾನ್ಸ್ ಬಂತು ಅಂದರೆ ತಂದೆ ತಾಯಿ ಅಕ್ಕ ಅಣ್ಣಂದಿರು ಕ್ಯಾಮೆರಾ ಫೋನ್ ಹಿಡಿದು ವೇದಿಕೆ ಮುಂದು ಬಂದುನಿಲ್ಲುತ್ತಿದ್ದುದ್ದು ನೋಡಿದರೆ, ಅವರ ಹುಮ್ಮಸ್ಸು ಅವರ ಚಹರೆಯಲ್ಲಿ ಎದ್ದು ಕಾಣುತ್ತಿತ್ತು. "ಎಲ್ಲೆಲ್ಲು ಬಂತು ಹಬ್ಬ" ಮತ್ತು "ಕರೆಯೋಲೆ ಕರೆಯೋಲೆ" ಹಾಡಿಗೆ ತೂಂಗಾಬಿ ಶಾಖೆಯ ಮಕ್ಕಳು ಮಾಡಿದರೆ. "ಜೂಟಾಟಾ ಜೂಟಾಟಾ" ಹಾಡಿಗೆ ಲಿವರ್ಪೂಲ್ ಶಾಖೆಯ ಮಕ್ಕಳು ಕುಣಿದರು.

ಮುಂದಿನ ಪುಟ ನೋಡಿ ...

ನಂತರ ಕೆಲವೇ ಕ್ಯಾರೆಯೋಕೆ ಹಾಡುಗಳಿಂದ ಕಾರ್ಯಕ್ರಮ ಅಂತ್ಯಗೊಂಡಿತು. ಕ್ಯಾರೆಯೋಕೆ ಮತ್ತು ನೃತ್ಯಗಳ ಭಾಗವನ್ನು ನಡೆಸಿಕೊಟ್ಟ ಶ್ರೀಮತಿ ಪೂರ್ಣಿಮಾ ಭಟ್ ಅವರ ನಿರ್ವಹಣೆಯು ನೆರೆದ ಜನರನ್ನು ಹುರಿದುಂಬಿಸುವಂತಿತ್ತು. ಚಿ| ಆರ್ಯನ್ ಹಾಡಿದ "ಗಜಮುಖನೆ ಗಣಪತಿಯೆ" ಭಾವಪೂರ್ಣವಾಗಿತ್ತಾದರೆ, ಪುಟ್ಟ ಬಾಲಕ ಚಿ|ಚಿನ್ಮಯ್ ರಂಗಿತರಂಗ ಚಿತ್ರದ "ಕರೆಯೋಲೆ ಕರೆಯೋಲೆ" ಹಾಡಿದಾಗ ಚಪ್ಪಾಳೆ ಮುಗಿಲು ಮುಟ್ಟಿತ್ತು. ಕು| ರೋಶಿನಿ ತುಂಬಾ ಇಂಪಾಗಿ "ಆಕಾಶ ಭೂಮಿ" ಹಾಡಿದರೆ ಶ್ರೀಮತಿ ಜಯಂತಿ "ಎಲ್ಲೋ ಜಿನುಗಿರುವ" ಸೊಗಸಾಗಿ ಹಾಡಿದರು. ಕಾರ್ಯಕ್ರಮದ ಅಂತ್ಯಕ್ಕೆ ಶ್ರೀ ಶ್ರೀನಿವಾಸನ್ ಅವರು ಉಳಿದವರು ಕಂಡಂತೆ ಚಿತ್ರದ "ಘಾಟಿಯಾ ಇಳಿದು" ಹಾಡನ್ನು ಒರಿಜಿನಲ್ ಹಾಡಿಗೂ ಸೈ ಎನ್ನುವಂತೆ ಹಾಡಿ ಇಡೀ ಕಾರ್ಯಕ್ರಮವೇ ಉನ್ನತ ಗುಣಮಟ್ಟದಲ್ಲಿತ್ತು ಎನ್ನುವಂತೆ ಹಾಡಿದರು. ನಂತರ ಶ್ರೀಮತಿ ಪೂರ್ಣಿಮಾ ಅವರು ಇತ್ತೀಚೆಗೆ ವಿಧಾನಸೌಧದಲ್ಲಿ ಶ್ರೀ ಕನಕಾಪುರ ನಾರಾಯಣ ನಾರಾಯಣ ಅವರಿಗೆ ಅವರ ನಿರಂತರ ಕನ್ನಡ ಸೇವೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದವರು ಮಾಡಿದ ಸನ್ಮಾನದ ಬಗ್ಗೆಯೂ ತಿಳಿಸಿಕೊಟ್ಟರು. ರುಚಿಕರ ಬಿಸಿಬೇಳೆ ಭಾತ್, ಮೊಸರನ್ನ, ಮೈಸೂರ್ ಪಾಕ್ ಚಳಿಗೆ ಹೇಳಿಮಾಡಿಸಿದ ಅಡುಗೆ ಹೊರಗೆ ರೆಡಿಯಾಗಿತ್ತು. ಒಟ್ಟಿನಲ್ಲಿ ನಿರೀಕ್ಷೆಗೂ ಮೀರಿ ಬಂದ ಜನರಿಗೆ ಒಳ್ಳೆಯ ಕಾರ್ಯಕ್ರಮ,ಊಟ ಮತ್ತು ಶಾಲೆಗೂ ತಕ್ಕಮಟ್ಟಿಗೆ ಸಹಾಯಧನ ಒದಗಿಸುವಲ್ಲಿ ಸಹಾಯವಾಯಿತು. ▪

ಸಿಡ್ನಿಯಲ್ಲಿರುವ ಸುಗಮ ಕನ್ನಡ ಕೂಟ ಮತ್ತು ಸಿಡ್ನಿ ಕನ್ನಡ ಶಾಲೆಯವರು ನಡೆಸಿಕೊಟ್ಟ ಯುಗಾದಿ ಉತ್ಸವದ ಸಂದರ್ಭದಲ್ಲಿ ತೆಗೆದ ಛಾಯಾ ಚಿತ್ರಗಳು

ಏಪ್ರಿಲ್ ೨೯, ೨೦೧೬ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಮತ್ತೊಂದು ದಾಖಲೆ ಸೃಷ್ಟಿಯಾದ ದಿನ. ಅದು ಏನೆಂದರೆ ಮೊಟ್ಟಮೊದಲ ಬಾರಿಗೆ ಕನ್ನಡ ಚಿತ್ರವೊಂದು ಭಾರತದಲ್ಲಿ ತೆರೆಕಾಣುವ ಮೊದಲೇ ಸಾವಿರಾರು ಮೈಲಿ ದೂರದ ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಪ್ರಪ್ರಥಮ ಬಾರಿಗೆ ಪ್ರದರ್ಶನ ಗೊಂಡಿದ್ದು. ಆ ಚಿತ್ರವೇ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅಭಿನಯದ 'ಚಕ್ರವ್ಯೂಹ '. ಇದನ್ನು ಇನ್ನಷ್ಟು ವಿಶೇಷವಾಗಿಸಿದ್ದು ಸ್ವತಃ ಪುನೀತ್ ಅವರೇ ಈ ಪ್ರೀಮಿಯರ್ ಶೋನಲ್ಲಿ ಭಾಗವಹಿಸಿದ್ದು.

ಸುಮಾರು ೨೦೦ ಜನ ಕನ್ನಡಿಗರು ಸಿಡ್ನಿ ಯ ಮೂಲೆಮೂಲೆಯಿಂದಲೂ ಆಗಮಿಸಿ, ವಾರದ ಮಧ್ಯವೆಂದು ಲೆಕ್ಕಿಸದೆ ತಮ್ಮ ನೆಚ್ಚಿನ ನಾಯಕನಿಗಾಗಿ ಲಿವರ್ಪೂಲ್ ನ ಇವೆಂಟ್ಸ್ ಸಿನಿಮಾಸ್ ನಲ್ಲಿ ಕಾಯುತ್ತ ಕುಳಿತಿದ್ದರು. ವೃದ್ಧರಿಂದ ಹಿಡಿದು ಪುಟ್ಟ ಕಂದಮ್ಮಗಳ ತನಕ ಎಲ್ಲರಿಗು ಒಂದೇ ತವಕ, ಯಾವಾಗ ತಮ್ಮ ಪ್ರೀತಿಯ ನಾಯಕನ ನಟನ ಆಗಮನ ಆಗುತ್ತದೋ ಎಂದು.

ಸರಿ ಸುಮಾರು ೮.೩೦ ಕ್ಕೆ ಪುನೀತ್ ರವರ ಆಗಮನವಾಯಿತು. ಅಲ್ಲಿ ನೆರೆದಿದ್ದ ಜನರ ಹರ್ಷೋದ್ಗಾರ ಇಡಿ ಮಲ್ಟಿಪ್ಲೆಕ್ಸ್ ನಲ್ಲಿ ಪ್ರತಿಧ್ವನಿಸುತ್ತಿತ್ತು. 'ಪವರ್ ಸ್ಟಾರ್ ಗೆ ಜೈ, ಅಣ್ಣಾವ್ರ ಮಕ್ಕಳಿಗೆ ಜೈ, ಡಾ. ರಾಜಕುಮಾರ್ ಗೆ ಜೈ ' ಎಂದು ಜಯಕಾರ ಹಾಕುತ್ತ ತಮ್ಮ ನೆಚ್ಚಿನ ತಾರೆಯನ್ನು ಸ್ವಗತಿಸಿದರು.

ಎಲ್ಲರ ಮುಖದ ಮೇಲೆ ಹರ್ಷ, ಸಂತೋಷ, ಸಂಭ್ರಮ ಕುಣಿದಾಡುತ್ತಿತ್ತು.

ಇಷ್ಟೆಲ್ಲಾ ಜನರ ಮಧ್ಯೆ ಸದಾ ಮುಗುಳ್ನಗುತ್ತ, ಯಾರಿಗೂ ಬೇಸರ ಆಗದ ಹಾಗೆ ಎಲ್ಲರೊಂದಿಗೆ ಫೋಟೋ, ಸೇಲ್ಫಿ ಹಾಗು ವೀಡಿಯೊಗೆ ನಿಂತಿದ್ದರು. ಇದಾದ ನಂತರ ನಮ್ಮ ಸಮುದಾಯದವರೇ ಆದ ಶ್ರೀಮತಿ ಶುಭಶ್ರೀ ಅವರು ಪುನೀತ್ ಅವರನ್ನು ಸ್ವಗತಿಸಿದರು.

ಎಲ್ಲ ಚಿತ್ರ ರಸಿಕರನ್ನು ಉದ್ದೇಶಿಸಿ ಮಾತನಾಡುತ್ತ ಪುನೀತ್ ಸವಿನಯದಿಂದ ಎಲ್ಲ ಕನ್ನಡಿಗರಲ್ಲಿ ಅರಿಕೆ ಮಾಡಿಕೊಂಡಿದ್ದೇನೆಂದರೆ, ಎಲ್ಲ ಕನ್ನಡಿಗರು ಯಾವ ದೇಶದಲ್ಲೇ ಇದ್ದರು ಕನ್ನಡ ಚಿತ್ರಗಳು ಬಂದಾಗ ಥೀಯೇಟರ್ ನಲ್ಲಿ ಒಮ್ಮೆಯಾದರೂನೋಡಿ. ಕೇವಲ ಸಿನಿಮಾ ರಿವ್ಯೂಗಾಗಿ ದಯವಿಟ್ಟು ಕಾಯಬೇಡಿ, ಕನ್ನಡ ಸಿನಿಮಾಗೆ ಹೆಚ್ಚು ಪ್ರೋತ್ಸಾಹ ಕೊಡಿ ಎಂದು .

ಎಲ್ಲರ ಕೋರಿಕೆಯ ಮೇರೆಗೆ ಸಾಲು ತಮ್ಮದೇ ಚಿತ್ರದ ಹಾಡು ' ಗುರುವಾರ ಸಂಜೆ ನಾ ಹೊರಟಿದ್ದೆ ' ಹಾಡನ್ನು ಸೊಗಸಾಗಿ ಹಾಡಿದರು.

ಕೊನೆಯಲ್ಲಿ, ಸಿಡ್ನಿ ಕನ್ನಡಿಗರು ತಂಡ ಪುನೀತ್ ಅವರಿಗೆ ಮೈಸೂರ್ ಪೇಟ, ಶಾಲು ಹೊದಿಸಿ ಸನ್ಮಾನಿಸಿದರು. ಎಲ್ಲರೊಂದಿಗೆ ಸಿನಿಮಾ ನೋಡುವ ಇಚ್ಛೆ ಇದ್ದರೂ ಕಾರಣಾಂತರಗಳಿಂದ ಅಲ್ಲಿಂದ ಬೀಳ್ಕೊಂಡರು.

ಈ ಹರ್ಷದ ಗುಂಗಲ್ಲೇ ಎಲ್ಲರೂ ಚಕ್ರವ್ಯೂಹ ಚಿತ್ರವನ್ನು ಪೂರ್ತಿ ನೋಡಿ, ತಮ್ಮ ನೆಚ್ಚಿನ ನಾಯಕ ನಟನನ್ನು ಭೇಟಿಯಾದ ಖುಷಿಯಲ್ಲಿ ಮನೆಗೆ ತೆರಳಿದರು. ▪

ದಿ ಮ್ಯಾನ್ ಹೂ ನ್ಯೂ ಇನ್ಫಿನಿಟಿ ಚಲನ ಚಿತ್ರ

ಸಿಡ್ನಿ ಶ್ರೀನಿವಾಸ್

ವಿಶ್ವದ ಮೇಧಾವಿ ವಿಜ್ಞಾನಿಗಳು ಮತ್ತು ಗಣಿತ ಶಾಸ್ತ್ರಜ್ಞರ ಬಗ್ಗೆ ಈ ನಡುವೆ ಚಲನ ಚಿತ್ರಗಳು ಹೊರಬರುತ್ತಿರುವುದು ಸ್ವಾಗತಾರ್ಹ. ಈ ಶ್ರೇಣಿಯಲ್ಲಿ ನಮ್ಮ ಶ್ರೀನಿವಾಸ ರಾಮಾನುಜನ್ ಅವರ ಬಗ್ಗೆಯ ಚಿತ್ರವೊಂದು ಇದೀಗ ತೆರೆ ಕಂಡಿರುವುದು ನಾವೆಲ್ಲಾ ಹೆಮ್ಮೆ ಪಡಬೇಕಾದ ಸಂಗತಿ. ರಾಬರ್ಟ್ ಕಾನಿಗಲ್ ಅವರು ೧೯೯೧ರಲ್ಲಿ ಬರೆದ ರಾಮಾನುಜನ್ ಅವರ ಜೀವನ ಚರಿತ್ರೆ ಈ ಸಾಧನೆಗೆ ಆಧಾರ.

ಗಣಿತದಲ್ಲಿ ಅತ್ಯುನ್ನತ ಶಿಖರವನ್ನು ಏರಿದ ರಾಮಾನುಜನ್ ಅವರ ಜೀವನ ಅಧೋಮಯವಾಗಿತ್ತು ಎಂಬುದು ತಿಳಿದ ವಿಚಾರ. ಈ ಚಿತ್ರದಲ್ಲಿ ನಿರ್ದೇಶಕರು ಆತನ ಇಂಗ್ಲೆಂಡ್ ಜೀವನ ಮತ್ತು ಸಾಧನೆಗಳತ್ತ ಗಮನ ಹರಿಸಿದ್ದಾರೆ. ಯಾವುದೋ ದೈವತೆಯ ಕರುಣೆಯಿಂದಾಗಿ ತಾನು ಗಣಿತ ಪ್ರಮೇಯಗಳನ್ನು ಕಂಡುಕೊಂಡೆ ಎನ್ನುವ ರಾಮಾನುಜನ್ (ನಟ ದೇವ್ ಪಟೇಲ್) ಒಂದೆಡೆ, ಗಣಿತದಲ್ಲಿ ಹೆಜ್ಜೆ ಹೆಜ್ಜೆಗೂ ಪ್ರೂಫ್ ಅತ್ಯಗತ್ಯ ಎನ್ನುವ ಪ್ರೊಫೆಸರ್ ಹಾರ್ಡಿ (ಜೆರೆಮಿ ಐರನ್ಸ್) ಮತ್ತೊಂದೆಡೆ. ಇವರಿಬ್ಬರ ಮಧ್ಯದ ತಾತ್ವಿಕ ಘರ್ಷಣೆ ಚಿತ್ರದಲ್ಲಿ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಇಂಗ್ಲೆಂಡಿನ ಚಳಿ, ಅವನಿಗಾಗದ ಅಲ್ಲಿಯ ಆಹಾರ ಮುಂತಾದುವುಗಳಿಂದ ಅವನು ಪಟ್ಟ ಬವಣೆ ಹೇಳತೀರದು. ಇದೇ ಅವನ ಅಕಾಲ ಮೃತ್ಯುವಿಗೂ ಕಾರಣವಾಯಿತು. ಅವನಿಗಾಗ ಕೇವಲ ೩೨ ವರ್ಷ ವಯಸ್ಸು. ಇವುಗಳ ಸಮರ್ಥ ಚಿತ್ರಣವನ್ನು ಕಂಡು ಅಮೆರಿಕಾ ಮತ್ತು ಸಿಡ್ನಿಗಳಲ್ಲಿ ಕಣ್ಣೀರು ಹರಿಸದವರಿಲ್ಲ.

ಮಿತಿಮೀರಿದ ಪ್ರೀತಿಯ ಕಾರಣವಾಗಿ ಅವನ ತಾಯಿಯ (ನಟಿ ಅರುಂಧತಿ ನಾಗ್) ವರ್ತನೆಯೇ ರಾಮಾನುಜನ್ನನಿಗೆ ಮಾರಕವಾಯಿತು. ಮದುವೆಯಾದರೂ ಆಷ್ಟೇನೂ ಒಡನಾಡಲಾರದ ಹೆಂಡತಿ ಜಾನಕಿಯ ಪಾತ್ರದಲ್ಲಿ ದೇವಿಕಾ ಭಿಸೆ ಅಭಿನಯಿಸಿದ್ದಾರೆ. ಗಂಡನನ್ನು ಕಾಣಲು ಅವಳು ದೇವಾಲಯದಲ್ಲಿ ಮರಳುಹಿಡಿಯನ್ನು ಅಶ್ರಯಿಸಿದ್ದು ಚಿಂತಾಜನಕ. ಅದೇ ಮರಳ ಕಣದಲ್ಲಿ ರಾಮಾನುಜನ್ ಅನೇಕ ಪ್ರಕಾರಗಳನ್ನು, ಅನಂತತೆಯನ್ನು ಕಂಡಿದ್ದ. ಇದನ್ನು ಕಂಡು ಪಾಪ ಅನ್ನದವರಿಲ್ಲ.

ಇನ್ನು ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಮತ್ತು ಟ್ರಿನಿಟಿ ಕಾಲೇಜುಗಳನ್ನು ನೋಡುವ ಸೌಭಾಗ್ಯ ವೀಕ್ಷಕರಿಗೆ. ಇಲ್ಲಿ, ಈ ವರೆಗೆ ಯಾವುದೇ ಚಿತ್ರೀಕರಣಕ್ಕೂ ಅವಕಾಶ ನೀಡಿರಲಿಲ್ಲ. ಐಸಾಕ್ ನ್ಯೂಟನ್ನನಿಂದ ಪ್ರಖ್ಯಾತ ವಾದ ರೆನ್ ಪುಸ್ತಕ ಭಂಡಾರವೂ ತೆರೆಯಮೇಲೆ ಮೂಡಿ ಬರುತ್ತದೆ.

ಜೀವನ ಚರಿತ್ರೆಯೊಂದನ್ನು ಚಿತ್ರೀಕರಿಸುವಾಗ ನಿರ್ದೇಶಕ ಕೆಲವು ಸಂಗತಿಗಳನ್ನು ಆರಿಸಿಕೊಂಡು ಹಲವನ್ನು ಬಿಟ್ಟುಬಿಡ ಬೇಕಾಗುತ್ತದೆ. ಕೆಲವೊಮ್ಮೆ ಇದು ಕೊರತೆ ಎಂದೆನಿಸಲೂ ಬಹುದು. ರಾಮಾನುಜನ್ ಆವರ ಬಾಲ್ಯ, ಶಾಲೆ, ಕಾಲೇಜು ಜೀವನ, ಇಂಗ್ಲೆಂಡಿನಿಂದ ಹಿಂದಿರುಗಿದ ಮೇಲೆ ಅವರ ಜೀವನ, ಕೊನೆಗೆ ಭಾರತದಲ್ಲಿ ಅವರ ಸಾವು, ಇವಾವೂ ಈ ಚಿತ್ರದಲ್ಲಿ ಮೂಡಿ ಬರುವುದಿಲ್ಲ. ಆದರೆ ಒಂದು ನಿಜ. ಆಯ್ದ ಭಾಗಗಳನ್ನು ಹೃದಯಂಗಮವಾಗಿ ಹೊರತರಲಾಗಿದೆ.

ವಿದ್ಯಾವಂತರು, ಎಲ್ಲಾ ಭಾರತೀಯರೂ ನೋಡಲೇ ಬೇಕಾದ ಚಿತ್ರ. ಇದನ್ನು ಕಂಡುಕೊಂಡು ನಾವು ಸಿಡ್ನಿಯಲ್ಲಿ ಏರ್ಪಡಿಸಿದ್ದ ಎರಡು ಪ್ರದರ್ಶನಗಳನ್ನೂ ವೀಕ್ಷಿಸಿ ಯಶಸ್ವಿಗೊಳಿಸಿದ ಅಭಿಮಾನಿಗಳಿಗೆ ಅಭಿನಂದನೆಗಳು ಮತ್ತು ಅಭಿವಂದನೆಗಳು. ▪

ಇತರರ ತಪ್ಪುಗಳಿಂದ ಕಲಿಯಿರಿ – ಏಕೆಂದರೆ ಎಲ್ಲಾ ತಪ್ಪುಗಳನ್ನು ನೀವೇ ಮಾಡಲು ಹೆಚ್ಚು ಕಾಲ ನೀವು ಬದುಕಿರೋಲ್ಲ –

ಇತರರು ತಪ್ಪು ಮಾಡೋಕೆ ಕಾಯಲೇಬೇಕಿಲ್ಲ. ನಾವೇ ತಪ್ಪು ಮಾಡಿ ಅದನ್ನು ಇತರರ ಮೇಲೆ ಹೊರಿಸೋ ಚಾಕಚಕ್ಯತೆ ಇದ್ದರೆ ಸಾಕಲ್ಲ.

ಯಾವುದೇ ಒಬ್ಬ ಮನುಷ್ಯ ತುಂಬಾ ಸತ್ಯವಂತನಾಗಿರೋಕೆ ಸಾಧ್ಯವಿಲ್ಲ. ಏಕೆಂದರೆ ನೆಟ್ಟಗೆ ಇರುವ ಮರದ ರೆಂಬೆಗಳನ್ನೇ ಮೊದಲು ಕತ್ತರಿಸೋದು. ಸತ್ಯವಂತನಿಗೇ ಮೊದಲ ಹೊಡೆತ ಬೀಳೋದು –

ಸತ್ಯವಂತರಾಗಿರೋದು ಸಾಧ್ಯವಿಲ್ಲ ಎಂತಲೇ ನಾವು ರಾಜಕೀಯ ಸೇರಿರೋದು.

ಯಾವುದೇ ಹಾವು ವಿಷಪೂರಿತವಲ್ಲದಿದ್ದರೂ ಸಹ ಅದು ಹಾಗೆ ನಟಿಸಿದರೆ ಅದಕ್ಕೇ ಕ್ಷೇಮ –

ಅದಕ್ಕೇ ವಿಧಾನಸೌಧದ ಹೊರಗೂ ಒಳಗೂ ನಾವು ಯಾವಾಗಲೂ ಸರ್ಕಾರದ ವಿರುದ್ಧ ಗಲಾಟೆ ಮಾಡಿದ ಹಾಗೆ ನಟಿಸುತ್ತಲೇ ಇರುತ್ತೇವೆ.

ಪ್ರತಿ ಸ್ನೇಹದ ಹಿಂದೆಯೂ ಒಂದು ಚೂರು ಸ್ವಾರ್ಥ ಇದ್ದೇ ಇರುತ್ತೆ. ಸ್ವಾರ್ಥ ಇಲ್ಲದ ಸ್ನೇಹವಿಲ್ಲವೇ ಇಲ್ಲ. ಇದು ಕಹಿಯಾದ ಸತ್ಯ –

ಸ್ನೇಹದ ಹಿಂದೆ ಸ್ವಾರ್ಥ ಇಲ್ಲದಿದ್ದರೆ ನಾವು ಶಾಸಕರೂ, ಮಂತ್ರಿಯೂ ಆಗೋದು ಸಾಧ್ಯವೇ ಇಲ್ಲ.

ನೀವು ಯಾವುದೇ ಕೆಲಸ ಪ್ರಾರಂಭಿಸುವ ಮೊದಲು ಮೂರು ಪ್ರೆಶ್ನೆಗಳನ್ನು ನಿಮಗೇ ಕೇಳಿಕೊಳ್ಳಿ. ನಾನು ಈ ಕೆಲಸವನ್ನು ಏಕೆ ಪ್ರಾರಂಭಿಸುತ್ತಿದ್ದೀನಿ? ಇದರ ಫಲಿತಾಂಶವೇನಾಗಬಹುದು? ನಾನು ಈ ಕೆಲಸದಲ್ಲಿ ಯಶಸ್ವಿಯಾಗುತ್ತೇನೆಯೇ? ಈ ಪ್ರಶ್ನೆಗಳ ಕುರಿತು ಚನ್ನಾಗಿ ಚಿಂತಿಸಿ ಉತ್ತರ ನಿಮಗೆ ಸಮಾಧಾನ ತರುವಂತಿದ್ದರೆ ಕೆಲಸ ಪ್ರಾರಂಭಿಸಿ -

ಚುನಾವಣೆಗೆ ನಿಂತ್ಕೊಳ್ಳಾ? ಮತಪೆಟ್ಟಿಗೆಗಳನ್ನು ಎಗರಿಸ್ಲಾ, ಚುನಾವಣೆ ಗೆದ್ದು ಮಂತ್ರಿಯಾಗ್ಲಾ ಅಂತ ಪ್ರೆಶ್ನೆ ಕೇಳ್ಕೊತೀನಿ, ನನ್ನ ಮನಸ್ಸು ಆಗಬಹುದು ಎನ್ನುತ್ತೆ ಆಗ ಉಮೇದುವಾರಿಕೆ ಸಲ್ಲಿಸ್ತೀನಿ.

ನಿಮಗೆ ಭಯ ಆವರಿಸಿದ ತಕ್ಷಣವೇ ಅದರ ಮೇಲೆ ಬಿದ್ದು ಅದನ್ನು ಸರ್ವನಾಶಗೊಳಿಸಿ-

ನಮ್ಮನ್ನು ಕಂಡರೆ ಇತರರು ಭಯಪಡೋ ಹಾಗೆ ವ್ಯಕ್ತಿತ್ವ ಬೆಳೆಸಿಕೊಂಡರೆ ನಮಗೆ ಭಯ ಆವರಿಸುವ ಪ್ರಮೇಯವೇ ಇರೋಲ್ಲ.

ಪ್ರಪಂಚದ ಅತ್ಯುತ್ತಮ ಶಕ್ತಿ ಎಂದರೆ ಯೌವನ ಮತ್ತು ಸೌಂದರ್ಯ ತುಂಬಿದ ಹೆಣ್ಣು –

ಅದು ನಮಗೂ ಗೊತ್ತು. ಅದಕ್ಕೇ ನಾವು ಅಂಥಾ ಶಕ್ತಿಯ ಜೊತೆಜೊತೆಗೆ ಹಗಲೂ ರಾತ್ರಿ ಇರಬೇಕು ಅಂತ ಸದಾ ಚಿಂತಿಸುತ್ತಿರುತ್ತೀವಿ ಮತ್ತು ಅವಕಾಶ ಮಾಡಿಕೊಂಡು ಶಕ್ತಿಯನ್ನು ಉಪಯೋಗ ಮಾಡ್ಕೊತೀವಿ

ನೀವು ಯಾವುದೇ ಕೆಲಸ ಪ್ರಾರಂಭಿಸಿದ ಮೇಲೆ ಅದರ ಫಲಿತಾಂಶ ಕುರಿತು ಚಿಂತಿಸಿ ಕೆಲಸವನ್ನು ಅರ್ಧಕ್ಕೇ ನಿಲ್ಲಿಸಬೇಡಿ. ಯಾರು ನಿಯತ್ತಿನಿಂದ ಕೆಲಸ ಮಾಡುತ್ತಾರೋ ಅವರೇ ಯಶಸ್ವಿಯಾಗೋದು –

ಖಂಡಿತಾ. ನಾವು ಪ್ರಾರಂಭಿಸಿದ ಕೆಲಸ (ಸರ್ಕಾರ ಉರುಳಿಸೋದು – ಮಂತ್ರಿ ಸ್ಥಾನ ಗಿಟ್ಟಿಸಿಕೊಳ್ಳೋದು – ವಿದೇಶ ಯಾತ್ರೆ ಮಾಡೋದು) ಯಶಸ್ವಿಯಾಗಲು ಏನೇನು ಮಾಡಬೇಕೋ – ಅಪಹರಣ, ದರೋಡೆ, ಕೊಲೆ ಮುಂತಾದುವು – ಅವುಗಳನ್ನೆಲ್ಲ ಮಾಡೇ ಮಾಡ್ತೀವಿ, ಅಥವಾ ಮಾಡಿಸ್ತೀವಿ ಮತ್ತು ಯಶಸ್ವಿಯಾಗ್ತೀವಿ.

ಹೂವಿನ ಪರಿಮಳ ಹರಡೋದು ಗಾಳಿ ಬೀಸುವ ದಿಕ್ಕಿನತ್ತ. ಆದರೆ ಒಳ್ಳೆಯ ಜನರ ಒಳ್ಳೆಯತನಗಳು ಎಲ್ಲಾ ದಿಕ್ಕುಗಳಿಗೂ ಹರಡುತ್ತವೆ. –

ಒಳ್ಳೆದು ಮಾಡ್ತೀವೋ ಕೆಟ್ಟದು ಮಾಡ್ತೀವೋ, ಆದರೆ ಒಳ್ಳೆದು ಮಾಡ್ತೀದೀವಿ ಅಂತ ಎಲ್ಲ ಕಡೆ ಸುದ್ದಿ ಹರಡೋ ಭಟ್ಟಂಗಿಗಳ ಗುಂಪೊಂದನ್ನು ಸೃಷ್ಟಿಸಿಕೊಂಡಿರ್ತೀವಲ್ಲ.

ದೇವರು ಬರೀ ವಿಗ್ರಹಗಳಲ್ಲಿರುತ್ತಾನೆ ಎನ್ನೋದು ತಪ್ಪು. ನಿಮ್ಮ ಒಳ್ಳೆಯ ಚಿಂತನೆಗಳೇ ದೇವರು. ನಿಮ್ಮ ಹೃದಯವೇ ದೇವಾಲಯ. –

ಗೊತ್ತು. ಅದಕ್ಕೇ ಅಧಿಕಾರ ಬರೀ ಚಿಂತನೆಯಲ್ಲಿರುತ್ತೆ ಅನ್ನೋದನ್ನು ನಾವು ನಂಬೋದಿಲ್ಲ. ನಮ್ಮ ಕುರ್ಚಿಯೇ ದೇವಾಲಯ, ನಮ್ಮ ಅದಿಕಾರವೇ ದೇವತಾ ಕಾರ್ಯ, ಭರವಸೆಗಳೇ ಮಂತ್ರ, ಲಂಚವೇ ದಕ್ಷಿಣೆ.

ಹುಟ್ಟಿನಿಂದ ಯಾರೂ ಉತ್ತಮರೆನಿಸಿಕೊಳ್ಳೋದಿಲ್ಲ. ಬದಲಿಗೆ ಅವರು ಮಾಡಿದ ಒಳ್ಳೆಯ ಕೆಲಸಗಳಿಂದ –

ಚೆನ್ನಾಗಿದೆ. ಮಂತ್ರಿಯಾಗೋದೂ ಕೂಡಾ ಒಂದು ಒಳ್ಳೇ ಕೆಲಸವೇ. ಮತ್ತೆ ಒಳ್ಳೇ ಕೆಲಸ ಮಾಡಬೇಕು ಅಂದ್ರೆ, ಮಂತ್ರಿ ಪದವಿ ಬೇಡ್ವೇ. ಅದಕ್ಕೇ ನಾವು ಒಳ್ಳೆ ಕೆಲಸ ಮಾಡೋಣ ಅಂತಲೇ ಮಂತ್ರಿಪದವಿಗೆ ಹೋರಾಡೋದು.

ಮುಂದಿನ ಪುಟ ನೋಡಿ ...

ನಿಮಗಿಂತ ತೀರ ಎತ್ತರದ ಮಟ್ಟದಲ್ಲಿರುವ ಅಥವಾ ನಿಮಗಿಂತ ತೀರಾ ಕೆಳಮಟ್ಟದಲ್ಲಿರುವವರೊಂದಿಗೆ ಎಂದೂ ಸ್ನೇಹ ಮಾಡಬೇಡಿ. ಏಕೆಂದರೆ ಅಂಥಾ ಸ್ನೇಹ ಎಂದೂ ಸಂತೋಷ ತಂದುಕೊಡೋದಿಲ್ಲ. –

ಅದಕ್ಕೇ ನಾವು ಎಂದೂ ಕೆಳಮಟ್ಟದ ರಾಜಕಾರಿಣಿಗಳ ಸ್ನೇಹ ಮಾಡೋದಿಲ್ಲ, ಪ್ರಧಾನಮಂತ್ರಿಯ ಸ್ನೇಹನೂ ಮಾಡಲ್ಲ. ಬರೀ ಮಂತ್ರಿಗಳು ಮುಖ್ಯಮಂತ್ರಿಗಳ ಸ್ನೇಹ ಮಾಡ್ತೀವಿ

ಮೊದಲ 5 ವರ್ಷ ನಿಮ್ಮ ಮಗುವನ್ನು ಅತಿಯಾಗಿ ಪ್ರೀತಿಸಿ. ನಂತರದ 5 ವರ್ಷಗಳಲ್ಲಿ ಅವಶ್ಯಕತೆ ಬಂದಾಗ ಬೈಯೋಕೆ, ತಿದ್ದೋಕೆ ಹಿಂಜರಿಯಬೇಡಿ. ನಂತರದ 5 ವರ್ಷಗಳಲ್ಲಿ ನಿಮ್ಮ ಮಗುವನ್ನು ಸ್ನೇಹಿತನಂತೆ ಕಾಣಿ. ನಿಮ್ಮ ಬೆಳೆದ ಮಕ್ಕಳೇ ನಿಮ್ಮ ಅತ್ಯುತ್ತಮ ಸ್ನೇಹಿತರು. –

ಇದು ಶಾಸಕರಿಗೂ ಅನ್ವಯ ಮಾಡ್ಕೊಂಡಿದೀವಿ. ಮೊದಲ 5 ವರ್ಷ ಹೊಸ ಶಾಸಕನನ್ನು ಅತಿಯಾಗಿ ಪ್ರೀತಿಸ್ತೀವಿ. ನಂತರ 5 ವರ್ಷ ಅವನ ಜೋಬಲ್ಲಿ ನಮ್ಮ ಕೈ ಇರುತ್ತೆ. ನಂತರದ 5 ವರ್ಷ ಅವನನ್ನು ಸ್ನೇಹಿತನಂತೆ ಕಂಡರೂ ಒಳಗೊಳಗೇ ದ್ವೇಷಿಸುತ್ತೀವಿ. ಏಕೆಂದ್ರೆ ನಮ್ಮ ಕುರ್ಚಿಗೆ ಯಾವತ್ತೂ ಅವನೇ ಪೈಪೋಟಿ ಒಡ್ಡೋನು.

ಪುಸ್ತಕಗಳು ದಡ್ಡರಿಗೆ ಅನುಪಯೋಗಿ ವಸ್ತುಗಳು ಹೇಗೆಂದ್ರೆ ದೃಷ್ಟಿಹೀನರಿಗೆ ಕನ್ನಡಿ ಇದ್ದಂತೆ –

ಎಲ್ಲಾ ಪುಸ್ತಕಗಳೂ ಹಾಗೇನಲ್ಲ. ನಮ್ಮ ಚೆಕ್ (ಕೆಲವು ಸಲ ಇತರರ ಚೆಕ್ ಪುಸ್ತಕವೂ) ಪುಸ್ತಕ ನಮಗೆ ತುಂಬಾ ಅತ್ಯುತ್ತಮ. ಅದೇ ನಮಗೆ ಕನ್ನಡಿ.

ವಿದ್ಯಾಭ್ಯಾಸ ನಿಮ್ಮ ಬದುಕಿಗೆ ತೀರ ಅವಶ್ಯಕ. ವಿದ್ಯಾವಂತರನ್ನು ಸಮಾಜ ತುಂಬಾ ಗೌರವಿಸುತ್ತದೆ. ಪೈಪೋಟಿಯಲ್ಲಿ ವಿದ್ಯಾಭ್ಯಾಸವು ಯೌವನ ಮತ್ತು ಸೌಂದರ್ಯವನ್ನೂ ಕೂಡಾ ಹಿಂದಿಕ್ಕುತ್ತದೆ. –

ಪ್ರತಿಯೊಂದು ಚುನಾವಣೆಯನ್ನೂ ಗೆಲ್ಲೋದು ಹೇಗೆ, ಪ್ರತಿಯೊಂದು ಸರ್ಕಾರದಲ್ಲೂ ಒಂದಲ್ಲ ಒಂದು ಕುರ್ಚಿ ಗಿಟ್ಟಿಸಿಕೊಳ್ಳೋದು ಹೇಗೆ ಎನ್ನುವ ವಿದ್ಯಾಭ್ಯಾಸವನ್ನು ನಾವು ಸದಾ ಮಾಡ್ತಲೇ ಇರ್ತೀವಿ. ▪

ಬೆಂಗಳೂರು ಸುದ್ದಿ ...

ಅಪರಂಜಿ ಹಾಸ್ಯ ಮಾಸಪತ್ರಿಕೆಯ 33ರ ಹಬ್ಬ 5.4.2016ರಂದು ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ನೆರವೇರಿತು. ಶ್ರೀ ನರಹಳ್ಳಿ ಬಾಲಸುಬ್ರಮಣ್ಯ, ಶ್ರೀ ಶ್ರೀನಿವಾಸ ವೈದ್ಯ ಶ್ರೀ ಎನ್. ರಾಮಾನುಜ ಜೊತೆಗೆ ಅಪರಂಜಿ ಉಪಸಂಪಾದಕರಾದ ಬೇಲೂರು ರಾಮಮೂರ್ತಿ ವೇದಿಕೆಯಲ್ಲಿದ್ದರು. ಇದೇ ಸಂದರ್ಭದಲ್ಲಿ ಬೆಂಗಳೂರಿನ ಗಾಂಧಿಬಜಾರಿನಲ್ಲಿರುವ ಅಂಕಿತ ಪುಸ್ತಕದ ಪ್ರಕಾಶ್ ಕಂಭತ್ತಳ್ಳಿ ಅವರನ್ನು ಸನ್ಮಾಸಿಸಲಾಯಿತು. ಅಪರಂಜಿ ವಿಶೇಷಾಂಕವೂ ಬಿಡುಗಡೆಯಾಯಿತು. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಟೀಕಾಚಾರ್ಯರ ಮಿಥ್ಯ ರಾಮಾಯಣ

ರಾಮೋತ್ಸವದ ಕಡೆಯ ದಿನ. ಅನರ್ಥದ ಟೀಕಾಚಾರ್ಯರು ವೇದಿಕೆಯಿಂದಲೇ 'ರಾಮಾಯಣದ ಬಗ್ಗೆ ನಿಮ್ಮಲ್ಲಿ ಏನೇ ಡೌಟ್ ಇದ್ದರೂ ಕೇಳಬಹುದು' ಎಂದು ಘೋಷಿಸಿದರು.

'ದಶರಥನಿಗೇಕೆ ಮೂರು ಹೆಂಡತಿಯರು?' ಫ್ಯಾಮಿಲಿ ಪ್ಲ್ಯಾನಿಂಗ್ ಇಲಾಖೆಯ ಗುಮಾಸ್ತೆಯಾದ ಆರು ಮಕ್ಕಳ ತಾಯಿ ಕನ್ಯಾಕುಮಾರಿ ಕೇಳಿದರು.

'ದಶರಥನ ಅಪ್ಪ ಅಜನಿಗೆ ಒಬ್ಬಳೇ ಹೆಂಡತಿ. ಆ ಹೆಂಡತಿಯೋ ಬಹಳ ಡೆಲಿಕೇಟು. ಏಳು ಮಲ್ಲಿಗೆ ತೂಕದ ಅವಳು ಅಜನೊಡನೆ ಒಂದು ಸಂಜೆ ವಾಕಿಂಗ್ ಹೋಗುವಾಗ ಆಕಾಶದಿಂದ ಒಂದು ಹೂಮಾಲೆ ಅವಳ ಮೇಲೆ ಬಿದ್ದುದರಿಂದ ಅವಳು ಸತ್ತುಹೋದಳು. ಇದರಿಂದ ಜೀವನದಲ್ಲೇ ಆಸಕ್ತಿ ಕಳೆದುಕೊಂಡ ಅಜ ಕಾಡಿಗೆ ಹೊರಟುಹೋದ. ಇವೆಲ್ಲವನ್ನು ಕಂಡ ದಶರಥ 'ಒನ್ ವೈಫ್ ಈಸ್ ನಾಟ್ ರಿಲಯಬಲ್ಲು. ಎಟ್ ಲೀಸ್ಟ್ ಇಬ್ಬರಿದ್ದರೆ ಒಬ್ಬಳು ಔಟ್ ಆಫ್ ಆರ್ಡರ್ ಆದರೆ ಮತ್ತೊಬ್ಬಳು ಇರುತ್ತಾಳೆ' ಎಂದುಕೊಂಡು ಇಬ್ಬರನ್ನು ಮದುವೆಯಾದ. ಇಬ್ಬರೂ ಪರಸ್ಪರ ಸವತಿ ಮತ್ಸರ ತೋರಿಸಲು ಆರಂಭಿಸಿದರು. ಅವರಿಬ್ಬರ ಜಗಳದ ಸಮಯದಲ್ಲಿ ಇನ್ನೊಬ್ಬಳಿರಲೆಂದು ಮೂರನೆಯವಳನ್ನು ಮದುವೆಯಾದ' ಉತ್ತರಿಸಿದರು ಟೀಕಾಚಾರ್ಯರು.

'ಪಾಯಸ ಕುಡಿದರೆ ಮಕ್ಕಳಾಗುತ್ತವೆಯೆ?' ಡ್ರಮ್ಮಾಕಾರದ ಡಯಟೀಷಿಯನ್ ದಾಮಿನಿ ಕೇಳಿದಳು.

'ದಶರಥನಿಗೆ ಬೇಟೆಯ ಹುಚ್ಚು. ಪಾಣಿಗ್ರಹಣಕ್ಕಿಂತ ಪ್ರಾಣಿಗ್ರಹಣಕ್ಕೇ ಹೆಚ್ಚಿನ ಆಸ್ಥೆ ತೋರಿಸುತ್ತಿದ್ದ. ಪುತ್ರಕಾಮೇಷ್ಠಿ ಯಾಗ, ಪಾಯಸ ಇವೆಲ್ಲ ನೆಪಮಾತ್ರ. ಯಾಗಕ್ಕೆಂದು ಉಳಿದುಕೊಂಡವನು ಪಾಯಸ ಹಿಡಿದು ಅಂತಃಪುರ ಸೇರಿದ. ಮಕ್ಕಳಾದವು' ವಿವರಿಸಿದರು ಆಚಾರ್ಯರು.

'ಕೈಕೇಯಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು?' ಕೇಳಿದರು ಪತ್ನಿದಾಸ್ ಭಟ್ಟರು.

'ಹೆಂಡತಿ ಒಮ್ಮೆ ನಿಮ್ಮ ಜೀವ ಉಳಿಸಿದಳೆಂದು ಹಿರಿಹಿರಿ ಹಿಗ್ಗಬೇಡಿ. 'ಕಸಿದುಕೊಳ್ಳುವ ಹಕ್ಕು ಎಂದಿದ್ರೂನೂ ಕೊಟೋವ್ಳಿಗೇನೇ ತಾನೇ' ಎನ್ನುತ್ತಾ ತನಗೆ ಅನುಕೂಲವಾದ ಸಮಯದಲ್ಲಿ ಪ್ರಾಣ ಹಿಂಡುತ್ತಾಳೆ ಎನ್ನುವುದನ್ನು ಜಗಕ್ಕೆ ತೋರಿಸಿಕೊಟ್ಟ ಹೆಣ್ಣು ಅವಳು. ಅಲ್ಲದೆ ತವರುಮನೆ ದಾಸಿ ಜೊತೆಗಿದ್ರೆ ಗಂಡನ ಜೀವಕ್ಕೇ ಫಾಸಿ ಅನ್ನೋದೂ ಈಕೆಯಿಂದ ತಿಳಿಯತ್ತೆ'

'ರಾಮ ಕಾಫಿ ಕುಡಿಯುತ್ತಿದ್ದನೆ?' ಕೆಫೆ ಕಾಫಿ ನೈಟ್ ಮಾಲಿಕನ ಕುತೂಹಲ.

'ಇಲ್ಲ. ಬಾಲ್ಯದಲ್ಲೇ ಅವನಿಗೆ ಅವರ ತಾಯಿ ಆರೋರೂಟ್ ಗಂಜಿ ಮಾಡಿಕೊಡುತ್ತಿದ್ದರೆಂದು ಸಂಶೋಧಕ ಟಿ.ಪಿ. ಕೈಲಾಸಂ ಹೇಳಿದ್ದಾರೆ. ಆರೋ ರೂಟ್ ಕುಡಿದುದರಿಂದಲೇ ಅವನ ಬಾಣಗಳ ಮಾರ್ಗ ತಪ್ಪಲಿಲ್ಲವಂತೆ'

'ಭರತ ರಾಮನ ಚಪ್ಪಲಿಗಳನ್ನು ತಂದದ್ದು ಏಕೆ?' ಗ್ರ್ಯಾಂಡ್ ಫುಟ್‌ವೇರ್ ಮಾಲಿಕ ಗಫೂರ್ ಕೇಳಿದ

'ರಾಮ ತನ್ನ ಪಟ್ಟಾಭಿಷೇಕದ ಉಡುಪನ್ನು ಬಿಟ್ಟುಹೋಗಿದ್ದ. ಆದರೆ ಯಾವುದೋ ಜ್ಞಾನದಲ್ಲಿ ಪಟ್ಟಾಭಿಷೇಕದ ಡ್ರೆಸ್‌ಗೆ ಮ್ಯಾಚಿಂಗ್ ಆಗುವ ಚಪ್ಪಲಿಯನ್ನು ತೊಟ್ಟುಹೋಗಿದ್ದ. ಡ್ರೆಸ್‌ಗೆ ಸರಿಯಾದ ಮ್ಯಾಚಿಂಗ್ ಚಪ್ಪಲಿ ಹಾಳಾದೀತೆಂಬ ಕಾಳಜಿಯಿಂದ ಭರತ ಚಪ್ಪಲಿಗಳನ್ನು ಪಡೆದುಕೊಂಡ'

'ನಂತರ ರಾಮನಿಗೆ ಕಾಡಿನಲ್ಲಿ ನಡೆಯಲು ತೊಂದರೆಯಾಗಲಿಲ್ಲವೆ?'

'ರಾಮನ ಪಾದಸ್ಪರ್ಶವಾದ ತಕ್ಷಣ ಬಂಡೆಯೇ ಹೆಣ್ಣಾಯಿತಂತೆ. ಇನ್ನು ಚಿಲ್ಲರೆ ಮುಳ್ಳುಗಳದೇನು ಲೆಕ್ಕ ಬಿಡಿ'

'ಜನಕಮಹಾರಾಜನ ಬಗ್ಗೆ ಏನು ಹೇಳುತ್ತೀರಿ?' ಕನ್ಯಾಪಿತೃವೊಬ್ಬರು ಕೇಳಿದರು.

'ಬಹಳ ದೊಡ್ಡ ಮನುಷ್ಯ. ಹೊಲದಲ್ಲಿ ಸಿಕ್ಕ ಹೆಣ್ಣುಮಗುವನ್ನು ತನ್ನದೆಂದೇ ಸಾಕಿಬೆಳೆಸಿ ಹೆಣ್ಣುಮಗುವೊಂದನ್ನು ಅಡಾಪ್ಟ್ ಮಾಡಿಕೊಂಡ ಮೊಟ್ಟಮೊದಲ ವ್ಯಕ್ತಿ. ಒಂದು ತೊಗೊಂಡ್ರೆ ಇನ್ನೊಂದುಚಿತ ಯೋಜನೆಯನ್ನು ಜಗತ್ತಿಗೆ ಪರಿಚಯಿಸಿದವನೇ ಜನಕ'

'ಹೇಗೆ? ಯಾವಾಗ?'

'ರಾಮ ಬಿಲ್ಲು ಮುರಿದಾಗ. ಮೊದಲು ಕಂಡೀಷನ್ ಇದ್ದದ್ದು ಬಿಲ್ಲು ಮುರಿದವನಿಗೆ ಸೀತೆಯನ್ನು ಕೊಟ್ಟು ಮದುವೆ ಮಾಡುವುದೆಂದು. ರಾಮನಿಗೆ ಮೂವರು ತಮ್ಮಂದಿರು. ತನಗೂ, ತನ್ನ ಸಹೋದರನಿಗೂ ಸೇರಿ ಸೀತೆಯಲ್ಲದೆ ಮೂರು ಹೆಣ್ಣುಮಕ್ಕಳು. ರಾಮನನ್ನು ತೊಗೊಂಡ್ರೆ ಲಕ್ಷ್ಮಣ, ಭರತ, ಶತ್ರುಘ್ನ ಉಚಿತವಾಗುವುದಾದರೆ ಸೀತೆಯನ್ನು ತೆಗೆದುಕೊಂಡರೆ ಊರ್ವಶಿ, ಮಾಂಡವಿ, ಶ್ರುತಕೀರ್ತಿಯರನ್ನು ಕೊಡುತ್ತೇನೆಂದು ಮೊಟ್ಟಮೊದಲ ಫ್ರೀ ಸ್ಕೀಂ ಕಮ್ ಎಕ್ಸ್‌ಚೇಂಜ್ ಆಫರ್ ಕೈಗೊಂಡವನೇ ಜನಕ' ಹೊಟ್ಟೆ ಕುಣಿಸಿಕೊಂಡು ನಗುತ್ತಾ ನುಡಿದರು ಟೀಕಾಚಾರ್ಯರು.

ಮುಂದಿನ ಪುಟ ನೋಡಿ

‘ರಾಮನು ವಾಲಿಯನ್ನು ಮರೆಯಿಂದ ಬಾಣ ಬಿಟ್ಟು ಕೊಂದದ್ದು ತಪ್ಪಲ್ಲವೆ?’ ಬುದ್ಧಿಜೀವಿ ಬಸಣ್ಣನ ಪ್ರಶ್ನೆ

‘ಮನುಷ್ಯ-ಮನುಷ್ಯರಲ್ಲಿ ಯುದ್ಧವಾದಾಗ ಮರೆಯಿಂದ ಕೊಂದರೆ ತಪ್ಪು. ಆದರೆ ವಾಲಿ ವಾನರ. ಪ್ರಾಣಿಗಳ ಬೇಟೆಗೆ ಇಲ್ಲಿಯೇ ನಿಂತು, ಹೀಗೇ ಬಾಣ ಹೂಡಬೇಕೆಂಬ ಯಾವುದೇ ವಾಸ್ತುನಿಯಮ ಇಲ್ಲ’

‘ಸೀತೆ ಚಿನ್ನದ ಜಿಂಕೆಯನ್ನು ಇಷ್ಟಪಟ್ಟದ್ದು ಏಕೆ?’ ಆಚಾರಿ ಸ್ವರ್ಣಚೋರ್ ಸವಾಲು

‘ಒಂದೇ ಕಾರಣ - ಅಂದು ಅಕ್ಷಯ ತದಿಗೆ’

‘ಹಾಗೆಂದು ಯಾರು ಎಲ್ಲಿ ಬರೆದಿದ್ದಾರೆ?’

‘ನಾನೇ ಬರೆದಿರುವ ಮಿಥ್ಯ ರಾಮಾಯಣದಲ್ಲಿ’

‘ಹೆಣ್ಣೊಬ್ಬಳು ಗಂಡನ್ನು ಇಷ್ಟಪಟ್ಟು ಬಳಿಬಂದಾಗ ಅವಳ ಕಿವಿ, ಮೂಗುಗಳನ್ನು ಕತ್ತರಿಸುವುದು ತಪ್ಪಲ್ಲವೆ?’ ಸ್ತ್ರೀವಾದಿ ಸಂಗಣ್ಣ ಕೇಳಿದರು.

‘ಲಕ್ಷ್ಮಣ ಪ್ರಪಂಚದ ಮೊಟ್ಟಮೊದಲ ಪ್ಲಾಸ್ಟಿಕ್ ಸರ್ಜನ್. ಶೂರ್ಪನಖಿಯ ಮೈಮಾಟ, ಕಣ್ಣು, ತುಟಿ ಎಲ್ಲವೂ ಸುಂದರವಾಗಿದ್ದವು. ಆದರೆ ಮೂಗು ವಕ್ರ, ಕಿವಿ ಮೊರದಂತೆ ಇದ್ದು ಅವಳ ಸೌಂದರ್ಯಕ್ಕೆ ಧಕ್ಕೆಯಾಗಿತ್ತು. ಲಕ್ಷ್ಮಣ ಶೂರ್ಪನಖಿಯ ಮೇಲೆ ಕನಿಕರಗೊಂಡು ಕಿವಿ, ಮೂಗುಗಳ ಪ್ಲಾಸ್ಟಿಕ್ ಸರ್ಜರಿ ಮಾಡಲೆಂದು ಕೊಯ್ದ. ರಕ್ಕಸಿ ಅಪಾರ್ಥ ಮಾಡಿಕೊಂಡು ಅರ್ಧ ಆಪರೇಷನ್‌ನಲ್ಲೇ ಆಪರೇಷನ್ ಟೇಬಲ್ಲಿಂದ ಎದ್ದು ಓಡಿಹೋದಳು. ಇದರಲ್ಲಿ ಲಕ್ಷ್ಮಣನದೇನೂ ತಪ್ಪಿಲ್ಲ’

‘ಸೀತೆ ವಿದೇಶಪ್ರವಾಸ ಮಾಡಿದ ಮೊದಲ ಮಹಿಳೆಯಲ್ಲವೆ?’ ಪ್ರವಾಸಪ್ರಿಯ ರೋಡೇಶನ ಪ್ರಶ್ನೆ.

‘ಅಲ್ಲ. ಉತ್ತರಪ್ರದೇಶದ ಮೀರತ್‌ನ (ಆಗಿನ ಮಯರಾಷ್ಟ್ರದ) ರಾಜ ಮಯಾಸುರನ ಮಗಳು ಮಂಡೋದರಿ. ಭಾರತದ ಮೊಟ್ಟಮೊದಲ ವಿಮಾನಯಾನ ಮಾಡಿದ ಮಹಿಳೆ ಅವಳು’

‘ಆಚಾರ್ಯರೆ, ಕಾರ್ಮಿಕರ ದಿನ ಹತ್ತಿರ ಬರುತ್ತಿದೆ. ಕಾರ್ಮಿಕರಿಗೂ, ಆಡಳಿತವರ್ಗಕ್ಕೂ ಹತ್ತದ, ಹರಿಯದ ರಾಮಾಯಣ ಇದ್ದೇ ಇರತ್ತೆ. ಅದರ ಬಗ್ಗೆ ಒಂದು ಪ್ರಶ್ನೆ ಕೇಳಬಹುದೆ?’

‘ಆಗಲಿ’

‘ಬಾಲಕಾರ್ಮಿಕರ ಬಗ್ಗೆ ಏನು ಹೇಳುತ್ತೀರಿ?’

‘ಕಲಿಯುಗದಲ್ಲಿ ಕಲಿಕೆಗೆ ಒತ್ತು ಇರುವುದರಿಂದ ಅದನ್ನು ಅಪರಾಧ ಎನ್ನಬಹುದು. ಆದರೆ ಮಹಾಭಾರತದಲ್ಲಿ ಹದಿನಾರಕ್ಕೇ ಯುದ್ಧಕ್ಕಿಳಿದ ಸೈನಿಕ ಅಭಿಮನ್ಯು ಒಂದು ವಿಧದಲ್ಲಿ ಬಾಲಕಾರ್ಮಿಕನೇ. ತ್ರೇತಾಯುಗದಲ್ಲಿ ಲಂಕೆಗೆ ಸೇತುವೆ ಕಟ್ಟಿದ ಎಲ್ಲ ಕಾರ್ಮಿಕರಿಗೂ ಬಾಲ ಇದ್ದುದರಿಂದ... ಎಲ್ಲರೂ ಬಾಲ ಕಾರ್ಮಿಕರೇ!!!’

‘ರಾಮನು ಸೀತೆಯನ್ನು ಅಗ್ನಿಪ್ರವೇಶಕ್ಕೆ ಗುರಿಪಡಿಸಿದ್ದು ತಪ್ಪಲ್ಲವೆ?’ ವಕೀಲ ವಕ್ರೇಶರ ಪ್ರಶ್ನೆ

‘ಎಲ್ಲರೂ ರಾಮನನ್ನು, ಈ ಸನ್ನಿವೇಶವನ್ನು ತಪ್ಪು ತಿಳಿದಿದ್ದಾರೆ. ನಮ್ಮಲ್ಲಿ ಪೊಂಗಲ್ ದಿನದ ಸಂಜೆ ಜಾನುವಾರುಗಳನ್ನು ಕಿಚ್ಚು ಹಾಯಿಸುತ್ತೇವೆ. ಕಿಚ್ಚು ಹಾಯಿಸುವುದರಿಂದ ಅವುಗಳಲ್ಲಿನ ಬ್ಯಾಕ್ಟೀರಿಯಾಗಳು ನಾಶವಾಗಿ ಅವು ಆರೋಗ್ಯದಿಂದ ದೀರ್ಘಕಾಲ ಬಾಳುತ್ತವೆ. ಸೀತೆ ರಕ್ಕಸರ ಮಧ್ಯೆ ಇದ್ದಳು. ರಾಮನು ‘ಎಲೈ ಸೀತೆ. ರಕ್ಕಸರ ನಡುವೆ ಇದ್ದ ನಿನಗೆ ಏನೇನು ಬ್ಯಾಕ್ಟೀರಿಯಾಗಳು ಹತ್ತಿಕೊಂಡಿರುತ್ತವೋ ಏನೋ... ಒಮ್ಮೆ ಕಿಚ್ಚು ಹಾಯ್ದುಬಿಡು. ನಿನಗೂ, ನಿನ್ನೊಡನೆ ಇರುವವರಿಗೂ ಬ್ಯಾಕ್ಟೀರಿಯಲ್, ಫಂಗಲ್, ವೈರಲ್ ಇಂಫೆಕ್ಷನ್ ಆಗುವುದು ತಪ್ಪಿಹೋಗಲಿ’ ಎಂದ. ಸೀತೆ ಒಪ್ಪಿ ಅಗ್ನಿ ದಾಟಿ ಬಂದಳು ಅಷ್ಟೆ. ಇಟ್ ವಾಸ್ ಪ್ಯೂರ್ಲೀ ಎ ಹೆಲ್ತ್ ಆಸ್ಪೆಕ್ಟ್’

‘ಹೆಣ್ಣುಮಕ್ಕಳು ರಾಮನ ದೇವಸ್ಥಾನಕ್ಕಿಂತಲೂ ಹನುಮಂತನ ದೇವಸ್ಥಾನಕ್ಕೇ ಹೆಚ್ಚು ಹೋಗಲು ಕಾರಣವೇನು?’ ಬ್ಯೂಟಿ ಬಬಿತಾ ಕೇಳಿದಳು.

‘ಅವನಂತೆಯೇ ಸಿಕ್ಸ್ ಪ್ಯಾಕ್ ಆಬ್ಸ್ ಇದ್ದು, ಪ್ರಶ್ನಿಸದೆ ಸೇವೆ ಮಾಡುವ ಮನೋಭಾವ ಇರುವವರು ತಮಗೆ ದೊರಕಲೆಂದು ವರ ಬೇಡಲು’

ಆ ವೇಳೆಗೆ ಮಂಗಳಾರತಿಯ ಸಮಯವಾಯಿತು. ಕೆಲವರು ಅತ್ತ, ಕೆಲವರು ಟೀಕಾಚಾರ್ಯರಿಗೇ ಮಂಗಳಾರತಿ ಮಾಡುತ್ತಾ, ಸಭೆಯಿಂದ ತೆರಳಿದರು. ▪



ವಿಚಾರ ವಿಹಾರ

ಮಾಲು, ಅಡಿಲೈಡ್

ಚಂಚಲತೆ

ಮನೋ ಮಧುಕರೋ ಮೇಘಃ ಮಾನಿನಿ ಮದನೋ ಮರುತ್
ಮಾ ಮದೋ ಮರ್ಕಟೋ ಮತ್ಸ್ಯಃ ಮಕರಾ ದಶ ಚಂಚಲಾಃ ||

ಇದು ಒಂದು ಸುಭಾಷಿತ. ಇದರ ಅರ್ಥ?
ಮನಸ್ಸು, ಜೇನುಹುಳ, ಮೋಡ, ಹೆಂಗಸು, ಕಾಮ, ಗಾಳಿ, ಲಕ್ಷ್ಮಿ, ಮದ, ಕೋತಿ, ಮತ್ತು ಮೀನು - ಈ ಹತ್ತು 'ಮ' ಕಾರಗಳು ಚಂಚಲವು.

ಒಂದು ಕ್ಷಣವೂ ಶಾಂತವಾಗಿರದಿರುವುದೇ ಮನಸ್ಸು. ಅಶಾಂತಿಗೆ ಮತ್ತು ಶಾಂತಿಗೆ ಮನಸ್ಸೇ ಕಾರಣ. ಮನಸ್ಸು ಸದಾ ಚಂಚಲ.

ಜೇನು ಹುಳ ಗಿಡದಿಂದ ಗಿಡಕ್ಕೆ, ಹೂವಿಂದ ಹೂವಿಗೆ ಸತತವಾಗಿ ಹಾರುವ ಕೀಟ. ಇದೂ ಕೂಡ ಚಂಚಲ.

ನಿಲ್ಲದೆ ಸಂಚರಿಸುತ್ತಲೇ ಇರುವುದು ಮೋಡಕ್ಕೆ ಅಭ್ಯಾಸ. ಗಾಳಿ ಬಂದಕಡೆ ಸರಿಯುವುದು ಮೋಡದ ಸ್ವಭಾವ. ಇದೂ ಚಂಚಲ.

ಚಾಂಚಲ್ಯಕ್ಕೆ ಮತ್ತೊಂದು ಹೆಸರು ಹೆಂಗಸು. ಅವರಿಗೆ ಈ ಚಂಚಲ ಸ್ವಭಾವ ದೈವದತ್ತ.

ಕಾಮವು ಕೂಡ ಚಂಚಲ. ಮನಸಲ್ಲಿ ಮೂಡುತ್ತದೆ ಮಾಯವಾಗುತ್ತದೆ. ಮತ್ತೆ ಮೂಡುತ್ತದೆ ಮಾಯವಾಗುತ್ತದೆ. ಇದೂ ಕೂಡ ಚಂಚಲ.

ಮರುತ್ ಎಂದರೆ ಗಾಳಿ. ಇದು ಸದಾ ಕಾಲದಲ್ಲಿ ಚಂಚಲ.

ಮಾ ಎಂದರೆ ಲಕ್ಷ್ಮಿ. ಹಣ ಒಂದು ಕಡೆ ನಿಲ್ಲುವುದಿಲ್ಲ. ಒಬ್ಬರಿಂದ ಇನ್ನೊಬ್ಬರಿಗೆ, ಇನ್ನೊಬ್ಬರಿಂದ ಮತ್ತೊಬ್ಬರಿಗೆ, ಮತ್ತೊಬ್ಬರಿಂದ ಮಗದೊಬ್ಬರಿಗೆ ಸಾಗುತ್ತಲೇ ಇರುವುದು ಹಣದ ಸ್ವಭಾವ.

ಮದ ಶಾಶ್ವತವಾಗಿ ಮನುಷ್ಯನಲ್ಲಿ ಇರಲು ಸಾಧ್ಯವಿಲ್ಲ ! ಯಾರೋ ಒಬ್ಬರು ಬಂದು ಮದವಿರುವ ಮನುಷ್ಯನನ್ನು ಸದೆಬಡಿದು ಅದನ್ನು ಓಡಿಸುತ್ತಾರೆ.

ಮರ್ಕಟಃ ಎಂದರೆ ಕೋತಿ. 'ಕಪಿಗೆ ಚಪಲತೆ ಸಹಜಂ'. ಕಪಿ ಮರದಿಂದ ಮರಕ್ಕೆ ಮನೆಯಿಂದ ಮನೆಗೆ ಸತತ ನೆಗೆಯುತ್ತಲೇ ಇರುತ್ತದೆ. ಮನಸ್ಸನ್ನು ಕಪಿಗೆ ಹೋಲಿಸುವುದು ಸರ್ವೇ ಸಾಮಾನ್ಯ.

ಮತ್ಸ್ಯಃ ಎಂದರೆ ಮೀನು. ಈ ಜಲಚಲರದ ಬಗ್ಗೆ ಹೇಳಲೇ ಬೇಕಾಗಿಲ್ಲ. ಇದು ಸಾದಾ ಚಂಚಲ.

ಮನಸ್ಸು ಅತಿ ಚಂಚಲವಾದದ್ದು, ಅದನ್ನು ನಿಗ್ರಹಿಸಲು ಮನುಷ್ಯ ಸತತ ಪ್ರಯತ್ನ ಮಾಡುತ್ತಲೇ ಇರುತ್ತಾನೆ ಮತ್ತು ನಿಗ್ರಹಿಸಲಾಗದೆ ವಿಫಲವಾಗುತ್ತಲೇ ಇರುತ್ತಾನೆ. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ನಾರ್ತರ್ನ್ ಪ್ರಾಂತ್ಯದ ಪುಷ್ಪ – ಸ್ಟರ್ಟ್ ಡೆಸರ್ಟ್ ರೋಸ್

ಆಸ್ಟ್ರೇಲಿಯಾದ ಹೂವುಗಳು

ಮಾಹಿತಿ ಸಂಗ್ರಹ: ಬದರಿ ತ್ಯಾಮಗೊಂಡ್ಲು

- ಆಸ್ಟ್ರೇಲಿಯಾದ ನಾರ್ತರ್ನ್ ಪ್ರಾಂತ್ಯದ ಪುಷ್ಪ ಲಾಂಛನವಾಗಿರುವ ಸ್ಟರ್ಟ್ ಡೆಸರ್ಟ್ ರೋಸ್ ಎನ್ನುವ ಈ ಪುಷ್ಪದ ಸಸ್ಯಶಾಸ್ತ್ರೀಯ ಹೆಸರು "ಗಾಸಿಪಿಯಮ್ ಸ್ಟರ್ಟಿಯಾನಂ"
- ಸುಮಾರು ಒಂದೆರಡು ಮೀಟರಿನಷ್ಟು ಬೆಳೆಯುವ ಈ ಸಸ್ಯವು, ಉಷ್ಣ ವಾತಾವರಣದಲ್ಲಿನ ಕಲ್ಲುಬಂಡೆಗಳ ಮಧ್ಯೆ ಬೆಳೆಯುತ್ತದೆ
- ದಟ್ಟ ಹಸಿರಿನ ಎಲೆಗಳುಳ್ಳ ಈ ಸಸ್ಯದ ಎಲೆಗಳು ಅಂಡಾಕಾರ ಅಥವಾ ಗುಂಡಗಿದ್ದು, ಐದು ಸೆಂಟಿಮೀಟರ್ ನಷ್ಟಿರುತ್ತದೆ
- ನಾರ್ತರ್ನ್ ಪ್ರಾಂತ್ಯದ ಪುಷ್ಪ ಲಾಂಛನವಾಗಿ ಜುಲೈ ೧೨ ೧೯೮೧ ರಲ್ಲಿ ಅಂಗೀಕರಿಸಲಾಯಿತು.
- ಈ ಗಿಡದ ಹೂವುಗಳು ಚಳಿಗಾಲದ ಕೊನೆಯಹೊತ್ತಿಗೆ ಯಥೇಚ್ಛವಾಗಿ ಅರಳುತ್ತವೆ
- ಸುಮಾರು ಐದು ಸೆಂಟಿಮೀಟರ್ ಅಷ್ಟಿರುವ ಕೆನ್ನೀಲಿ ಬಣ್ಣದ ದಳಗಳುಳ್ಳ ಈ ಹೂವಿನ ಬುಡವು, ಕೆಂಪು ಬಣ್ಣದಿಂದ ಕೂಡಿರುತ್ತದೆ
- ಬಿಂದಿಗೆ ಹೂವಿನ ಜಾತಿಗೆ ಸೇರಿದ ಈ ಸಸ್ಯವನ್ನು ಬೀಜ ಮತ್ತು ಕಟಿಂಗ್ ಮೂಲಕ ಪ್ರಸರಿಸಬಹುದು ▪

ಸ್ಟರ್ಟ್ ಡೆಸರ್ಟ್ ರೋಸ್ ಹೂವು

ಸ್ಟರ್ಟ್ ಡೆಸರ್ಟ್ ರೋಸ್ ಹೂವಿರುವ ಒಂದು ಸ್ಟ್ಯಾಂಪ್

ಸೆಪ್ಟೆಂಬರ್ ೨೦೧೫ ರಿಂದ ಈ ಸಂಚಿಕೆಯವರೆಗೆ ಆಸ್ಟ್ರೇಲಿಯಾದ ಪ್ರಾಂತೀಯ ಪುಷ್ಪಗಳ ಪರಿಚಯವು ಈ ಸರಣಿಯಲ್ಲಿ ಬಂದಿದೆ. ಈ ಸಂಚಿಕೆಯೊಡನೆ "ಆಸ್ಟ್ರೇಲಿಯಾದ ಹೂವುಗಳು" ಮಾಲಿಕೆಯು ಸಮಾಪ್ತವಾಗುತ್ತಿದೆ.

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile

Contact Mr Sudheendra Rao EMAIL
Mobile 0415 291 723

choice HOME LOANS

Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.

Contact Mr Umesh EMAIL
Mobile 0401 034 456

AUSTINDIA SANGAM TRANSPORT

Contact Mr Eranna Gotyal EMAIL
Mobile 0404 215 605

ಕನಸಿನ ಲೋಕ : (ಹಾಸ್ಯ)

ಕನಕಾಪುರ ನಾರಾಯಣ



ಶಾಲೆಯ ಮೇಷ್ಟ್ರು ದಿನಾ ಮಧ್ಯಾಹ್ನದ ವೇಳೆ ಊಟದ ಬಳಿಗ ಸ್ವಲ್ಪಕಾಲ ಮಕ್ಕಳ ಎದಿರಿನಲ್ಲೇ ನಿದ್ದೆ ಮಾಡುತ್ತಿದ್ದರು. ಮಕ್ಕಳು ಕೇಳಿದರೆ "ನಾನು ಹಿಂದಿನ ಕಾಲದ ಮಹರ್ಷಿಗಳನ್ನು ಭೇಟಿ ಮಾಡಲು ಕನಸಿನ ಲೋಕಕ್ಕೆ ಹೋಗಿದ್ದೆ" ಎನ್ನುತ್ತಿದ್ದರು.

ಒಂದು ದಿನ ಸುಡುವ ಬಿಸಿಲಿನ ಧಗೆಗೆ ಸುಸ್ತಾಗಿದ್ದ ಮಕ್ಕಳು ಹಾಗೇ ಕೂತಲ್ಲೇ ನಿದ್ದೆ ಮಾಡುತ್ತಿದ್ದರು. ಇದನ್ನು ಕಂಡ ಮೇಷ್ಟ್ರು "ಮಕ್ಕಳೇ ಏನು ಮಾಡುತ್ತಿದ್ದೀರಿ" ಎಂದು ರೇಗಿದರು.

ಅದಕ್ಕೆ ಮಕ್ಕಳು "ನಾವೂ ಹಿಂದಿನ ಕಾಲದ ಋಷಿಗಳನ್ನು ಕಾಣಲು ಕನಸಿನ ಲೋಕಕ್ಕೆ ಹೋಗಿದ್ದೆವು" ಎಂದರು.

ಅದಕ್ಕೆ ಮೇಷ್ಟ್ರು “ಏನಂದ್ರು ಋಷಿಗಳು?” ಎಂದು ವಿಚಾರಿಸಿದರು.

ತಕ್ಷಣ ಗುರುಗಳಂತೇ ಸಮಯಸ್ಫೂರ್ತಿ ಯಿಂದ ಮಕ್ಕಳು "ಇಲ್ಲಿ ದಿನಾ ಮಧ್ಯಾಹ್ನ ನಮ್ಮ ಮೇಷ್ಟ್ರು ಬರ್ತಾರಾ ಅಂದ್ರಿ, ಅದಕ್ಕೆ ಇಲ್ಲಿ ಯಾರೂ ಬಂದಿಲ್ಲವಲ್ಲಾ ಅಂದ್ರು".

ಹುಡುಗರ ಜಾಣ್ಮೆ ಗುರುಗಳ ತಲೆ ತಗ್ಗಿಸುವ ಹಾಗೆ ಮಾಡಿತು. ▪

ರೆಸಿಪಿ ಕೊಡ್ತೀರಾ!

ಕೇಸರಿ ಬಾದಾಮಿ ಕುಲ್ಫಿ

ಬೇಕಾಗುವ ಸಾಮಗ್ರಿಗಳು

- ಹಾಲಿನ ಪುಡಿ 50ಗ್ರಾಂ, ನೀರು ಅರ್ಧ ಲೀಟರ್
- ಜೋಳದಹಿಟ್ಟು 1 ಚಮಚ, ಖೋವಾ 50 ಗ್ರಾಂ, ಕೇಸರಿ 1 ಚಿಟಿಕೆ
- ಹತ್ತು ಬಾದಾಮಿ ಚೂರು, ಸಕ್ಕರೆ 75 ಗ್ರಾಂ, ಐಸ್ ಕ್ರೀಮ್ ಎರಡು ಕಪ್

ಮಾಡುವ ವಿಧಾನ

- ನೀರಿನೊಂದಿಗೆ ಹಾಲಿನ ಪುಡಿ ಬೆರೆಸಿ, ಸಕ್ಕರೆ ಕೇಸರಿ ಸೇರಿಸಿ ಹತ್ತು ನಿಮಿಷ ಕುದಿಸಿ
- ಖೋವಾ ಮತ್ತು ಬಾದಾಮಿಯನ್ನು ಹಾಕಿ ಮತ್ತೆ ಹತ್ತು ನಿಮಿಷ ಕುದಿಸಿ
- ಜೋಳದ ಹಿಟ್ಟನ್ನು ಮೂರು ಚಮಚ ನೀರಿನಲ್ಲಿ ಬೆರೆಸಿ, ಐಸ್ ಕ್ರೀಮ್ ಅನ್ನೂ ಮಿಶ್ರಣಕ್ಕೆ ಸೇರಿಸಿ ಮತ್ತೆ ಹತ್ತು ನಿಮಿಷ ಕುದಿಸಿ. ಒಲೆಯ ಮೇಲಿಂದ ಇಳಿಸಿ ತಣ್ಣಗಾಗಲು ಬಿಡಿ. ಅಗಲವಾದ ಪಾತ್ರೆಗೆ ಹಾಕಿ ಫ್ರಿಡ್ಜ್ ನಲ್ಲಿ ಅರ್ಧಗಂಟೆ ಇಟ್ಟು ಬೇಕಾದ ಅಕಾರಕ್ಕೆ ಕತ್ತರಿಸಿ ಕಡ್ಡಿ ಚುಚ್ಚಿಡಿ
- ಮತ್ತೆ ಒಂದು ಗಂಟೆ ಫ್ರಿಡ್ಜ್ ನಲ್ಲಿಟ್ಟು ತಿನ್ನಲು ಕೊಡಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ಒಗಟು

೧. ತಲೆ ಮೇಲೆ ಹರಳು , ಬಾಯಲ್ಲಿ ಬೆರಳು

೨. ಅವ್ವ ಮುಳ್ಳಿ , ಮಗಳು ಕೆಂಪ್ಗೆ ಚಂದಾಗವಳೆ

ಉತ್ತರಕ್ಕೆ ಪುಟ ೧೨ ನೋಡಿ

ಮನ ಮೋಹನ ...

ಯಮುನ ತೀರದಲಿ ಸುಮನ ಕೃಷ್ಣನ್ನ
ವರಿಸದವಳು ಯಾರೆ
ತರುಣ ಯಾದವಗೆ ಕಣ್ಣ ನೀರನ್ನ
ಸುರಿಸದವಳು ಯಾರೆ

ಅಂದ ಮೂರುತಿ ನಂದ ಹರಿಯನ್ನ
ಬಳಸದವಳು ಯಾರೆ
ಸುಂದರಾಂಗನ ಅಂಗ ಸಂಗವನು
ಬಯಸದವಳು ಯಾರೆ

ಮುದ್ದು ಗೋಪನಿಗೆ ಮುದ್ದೆ ಬೆಣ್ಣೆಯನು
ಉಣಿಸದವಳು ಯಾರೆ
ಶುದ್ಧ ಮನಸಿನ ತಿದ್ದ ತಿಲಕನಿಗೆ
ಸೆಣಸದವಳು ಯಾರೆ

ಕೊಳಲ ಮಾಧವಗೆ ತನ್ನ ಅಳಲನ್ನ
ಹೇಳದವಳು ಯಾರೆ
ಕೊರಳ ಕೊಂಕಿಸುತ ತರಳ ಮೋಹನನ
ಕೇಳದವಳು ಯಾರೆ

ತುಂಬು ಚಂದಿರನ ಹೊಂಬೆಳಕಿನಲಿ
ಮೀಯದವಳು ಯಾರೆ
ಗೊಂಬೆಯಂತಿರುವ ಜಂಭ ಮದನನಿಗೆ
ನೋಯದವಳು ಯಾರೆ

ಚೆಲುವ ರಾಯನಿಗೆ ಒಲವ ಮಾಲೆಯನು
ಹೊರೆಸದವಳು ಯಾರೆ
ಕೊಳಲ ಮುರಳಿಗೆ ಇರುಳ ದೀಪವನು
ಉರಿಸದವಳು ಯಾರೆ

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. ಇದುವರೆವಿಗೂ ಭಾರತರತ್ನ ಪ್ರಶಸ್ತಿಯನ್ನು ಗಳಿಸಿರುವ ಕರ್ನಾಟಕದ ಮೂವರು ಗಣ್ಯವ್ಯಕ್ತಿಗಳನ್ನು ಹೆಸರಿಸಿರಿ.

೨. ಇವರುಗಳು ಪ್ರಶಸ್ತಿಗಳನ್ನು ಯಾವ ವರ್ಷಗಳಲ್ಲಿ ಗಳಿಸಿದ್ದಾರೆ?

ಸರಿ ಉತ್ತರಕ್ಕೆ ಪುಟ ೨೧ ನೋಡಿ

ಒಗಟು – ಉತ್ತರ

೧. ಉಂಗುರ ೨. ಹಲಸಿನ ಹಣ್ಣು

ಹಾಸ್ಯ ಚಿಲುಮೆ

ಗುಂಡ: ಅಪ್ಪಾ ಗುಲಾಬಿ ಗಿಡ ನೆಟ್ಟು ಒಂದು ತಿಂಗಳಾದ್ರೂ ಬೇರು ಬಿಟ್ಟೇ ಇಲ್ಲ?

ಅಪ್ಪ:ಅದು ನಿಂಗೆ ಹೇಗೆ ಗೊತ್ತು?

ಗುಂಡ: ಹೌದಪ್ಪಾ, ನಾನು ದಿನಾ ಕಿತ್ತು ನೋಡ್ತಿದ್ದೀನಿ!

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಧಾರೆ ಮುಗಿದಾದ ಮೇಲೆ ಗಂಡು ಹೆಣ್ಣಿನ ಕಡೆಯವರಿಬ್ಬರೂ ಉರುಳಾಡದೆ, ಹೂವಿನ ಚೆಂಡು ಬಳಸಿ ನಡೆಸುವ ಕಲಾಪ.

೨. ಮದುವೆಗಳ ಕಾಲದಲ್ಲಿ ಜರಿ ಸೀರೆಗಳ ಅಂಗಡಿಗಳಲ್ಲಿ ವ್ಯಾಪಾರವಾಗುವ ಪರಿ.

೩. ಕಬ್ಬಿಣ ಮತ್ತು ಚಿನ್ನವು ಗುಣ, ಬೆಲೆಗಳಲ್ಲಿ ಅಪಾರ ವ್ಯತ್ಯಾಸವಾದರೂ, ಜಾತಿ ಮಾತ್ರ ಒಂದೇ.

೪. ಬೇರೆಯವರ ಪಾಲೇನೂ ಆಗಿಲ್ಲ ಅವನು, ಮೈಮರೆತಿದ್ದಾನಷ್ಟೇ.

೫. ಕೂತು ತಿಂದರೆ ಸಾಲದಾಗುವ ಹಣ ಯಾವುದರಲ್ಲಿದೆ?

೬. ಯುಧಿಷ್ಠಿರನನ್ನು ಪರೀಕ್ಷಿಸಲು ಪ್ರಶ್ನೆ ಕೇಳಿದಾತ.

ಉತ್ತರ: ಎರಡೂ ಕಡೆಗಳಲ್ಲಿ ಸೌಖ್ಯವೆಂದು ಪತ್ರಗಳಲ್ಲಿ ಒಕ್ಕಣೆ ಮಾಡುತ್ತಿದ್ದ ಈ ಸಂಪ್ರದಾಯ.ಅಳಿಸಿ ಹೋಗುತ್ತಿದೆಯೇ

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಮೇ ೨೫ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಏಪ್ರಿಲ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಬಿ.ಆರ್.ವತ್ಸಲ ದ್ವಾರಕನಾಥ್, ಕೆ.ಜಿ.ಎಫ್
- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಹರಿಣಿ ರಾವ್, ನವದೆಹಲಿ
- ಶುಭಶ್ರೀ, ಸಿಡ್ನಿ
- ವೆಂಕಟೇಶ್ ಮೂರ್ತಿ, ಚಿತ್ರದುರ್ಗ

ಏಪ್ರಿಲ್ ತಿಂಗಳ ಪದಪುಂಜದ ಉತ್ತರ

೧. ಸಮುದ್ರದಿಂದೊದಗುವ ಬಲು ಮುಖ್ಯ ಖನಿಜಕ್ಕೂ, ಈ ಜನಪ್ರಿಯ ತಿಂಡಿಗೂ ಸಂಬಂಧವುಂಟೇನು?

ಉ	ಪ್ಪಿ	ಟ್ಟು

೨. ಜೊತೆಯಲ್ಲೇ ನೆಲೆಸದಿದ್ದರೂ 'ಸಾಕಪ್ಪಾ ಇವರದು' ಎನಿಸುವಂತಹ 'ಒಡನಾಟ'.

ಸ	ಹ	ವಾ	ಸ

೩. ಲಕ್ಷ್ಮೀನರಸಿಂಹನು ಪ್ರಸನ್ನನಾಗಿರದೇ ಇರುವಾಗಿನ ಮತ್ತೊಂದು ರೂಪ!

ಉ	ಗ್ರ	ನ	ರ	ಸಿಂ	ಹ

೪. ಇರುವುದೆಲ್ಲವ ತ್ಯಜಿಸಿದ ದೊರೆಗಳೇನು, ಕರ್ನಾಟಕ ಸಂಗೀತದ ತ್ರಿಮೂರ್ತಿಗಳಲ್ಲೊಬ್ಬರಾದ ಇವರು?

ತ್ಯಾ	ಗ	ರಾ	ಜ

೫. ಬೇರೆಯವರನ್ನು ಅಕ್ರಮಿಸಿಕೊಳ್ಳಲಿಲ್ಲ ಅವನು, ತನ್ನ ಶೌರ್ಯ ತೋರಿಸಿದನಷ್ಟೆ.

ಪ	ರಾ	ಕ್ರ	ಮ

ಉತ್ತರ: ನಿಮ್ಮ ಕೆಲಸ ಸಾಧಿಸಲು ಇದೂ ಒಂದು ಮಾರ್ಗ.

ಉ	ಪ	ವಾ	ಸ	ಸ	ತ್ಯಾ	ಗ್ರ	ಹ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ರಚನೆ: ಶ್ರೀಮತಿ ದಿವ್ಯಶ್ರೀ ವಿಕ್ರಂ, ಬೆಂಗಳೂರು

ಅಸಾದುಲ್ಲ ಬೇಗ್ ಅವರ ಶಾಯರಿಗಳು

ಬಾಲ್ಯ

ಜಂಪರ್ ತೊಟ್ಟ ಹೆಣ್ಣು ಮಗು
ನೆತ್ತಿ ನಿಲ್ಲದ ಮಗುವನ್ನೆತ್ತಿ
ಭಿಕ್ಷೆ ಬೇಡುತ್ತಿತ್ತು...
ಬೆಚ್ಚಿದೆ !

ಆಡದ ಆಟವಿಲ್ಲ
ಗೋಲಿ,ಚಿನ್ನಿದಾಂಡು
ಲಗೋರಿ,ಕುಂಟಬಿಲ್ಲೆ;
ಈ ಮಗುವಿಗೇಕೆ ಇಲ್ಲ ?

ತಲೆಗೆ ಎಷ್ಟೆ ಬಣ್ಣದ ರಿಬ್ಬನ್ನು
ಚಪ್ಪಲಿ, ಕೈಗೆ ಬಳೆ ?
ಯಾವ ನೋವು ಇವಳಿಗೆ ?
ಕಂಕುಳಲ್ಲಿರುವ ಭಾರ
ಕನಸಾಗೇ ಉಳಿದ ಶಾಲೆ !
ಬಿಡುತ್ತಿರುವಾಗಲೇ ಕಣ್ಣೂ,
ಕಲಿಯುತ್ತಿದೆಯೇ
ಉದರ ತುಂಬುವ ಕಲೆ ?

ನಾವು ಮರುಗಿದರೆ ಸಾಕೆ !
ಯೋಚಿಸಬೇಡವೇ ?
ಹೊರಲಾರದವರು...ಹೊರೆ
ಹೊತ್ತರೇಕೆ ?
ಆಳಲಾರದವರು ದೊರೆ
ಆದರೇಕೆ ?

ನಾವು ಮರುಗಿದರೆ ಸಾಕೆ
ಯೋಚಿಸಬೇಡವ ?

ಕಥೆ

ಮಳೆ

ಲೇಖಕರು:
ವೈ. ಕೆ. ಸಂಧ್ಯಾ ಶರ್ಮ

ಕೆಸರು ನೆಲದಲ್ಲಿ ಹವಾಯಿ ಚಪ್ಪಲಿಯ ಕಚಪಚ ಸದ್ದು. ಅದೇ ತಾನೆ ಮಳೆ ಬಂದು ನಿಂತಿತ್ತು. ಬೆಳಗಿನಿಂದ ಒಂದೇ ಸಮನೆ ಸಣ್ಣಗೆ ಜಿಟಿ ಜಿಟಿ ಸುರಿಯುತ್ತಿದ್ದ ಮಳೆಯನ್ನು ಕಂಡು ಸ್ಮಿತಾ ಅದೆಷ್ಟು ಬಾರಿ ಅದನ್ನು ಶಪಿಸಿದ್ದಳೋ. ಮಳೆ ನಿಂತಿರಬಹುದೇ ಎಂಬ ಆಶೆಯಿಂದ ನಾಲ್ಕಾರು ಬಾರಿ ವರಾಂಡಕ್ಕೆ ಬಂದು ಕಿಟಕಿಯಿಂದ ಬಗ್ಗಿ ನೋಡಿ `ಥತ್ ದರಿದ್ರ ಮಳೆ, ಈ ಬೆಂಗಳೂರ್ನಲ್ಲಿ ಏನಿದೆ ಅಂತ ಹೀಗ್ ಸುರಿಯತ್ತೋ ನಾಕಾಣೆ...ಯಾರಿಗೆ ಬೇಕಿತ್ತು, ಅತ್ಲಾಗೆ ಯಾವುದಾದ್ರೂ ಹಳ್ಳೀಲಿ ಸುರ್ಕೊಂಡು ಹೋಗಿದ್ರೂ ಸಾರ್ಥಕವಾಗ್ತಿತ್ತು...ನಮ್ಮ ಗ್ರಾಚಾರ, ಹೂಂ ಎಲ್ಲ ಅಪ್‌ಸೆಟ್ ಆಗಿಹೋಯ್ತು ನಮ್ಮ ಪ್ರೋಗ್ರಾಮು' ಎಂದವಳು ಗೊಣಗುತ್ತ ಬೆಡ್‌ರೂಂ ಹೊಕ್ಕು ಕನ್ನಡಿಯ ಮುಂದೆ ನಿಂತು ಅಡಿಯಿಂದ ಮುಡಿಯವರೆಗೂ ನೋಡಿಕೊಂಡಳು. ಒಂದು ಗಂಟೆಗೂ ಮಿಕ್ಕು ಕನ್ನಡಿಯ ಮುಂದೆ ನಿಂತು ಶ್ರದ್ಧೆಯಿಂದ ನೀಟಾಗಿ ಅಲಂಕರಿಸಿಕೊಂಡಿದ್ದಳು. ಮಳೆ ಬಿಡುವು ಕೊಡಬಹುದೆಂಬ ಭರವಸೆಯಿಂದ ಕೇಸರಿ ಬಣ್ಣದ ಒಡಲಿಗೆ ಕಡುಹಸುರಿನ ಅಂಚಿನ ಕಾಂಜೀವರಂ ಸೀರೆಯನ್ನು ಉಟ್ಟಿದ್ದೂ ಆಗಿತ್ತು. ಬಾಬ್ ಮಾಡಿದ ಕೂದಲನ್ನು ನಿನ್ನೆಯಷ್ಟೇ ನೇರ-ನುಣುಪು ಮಾಡಿಸಿದ್ದರಿಂದ ಅಂದ ಕಾಣುತ್ತಿತ್ತು. ಮೇಕಪ್ಪು ಕೊಂಚ ಗಾಢವಾಗೇ ಇತ್ತು. ಕನ್ನಡಿಯ ಸುಂದರಿಯನ್ನು ಕಂಡು ಖುಷಿಗೊಳ್ಳುವಷ್ಟರಲ್ಲಿ ಕಿವಿಯ ತುಂಬ ಮಳೆಯ ಮೊರೆತದ ಸದ್ದು ಕಿವಿಗಡಚಿಕ್ಕಿ ಮುಖ ಸಣ್ಣದಾಗಿತ್ತು.

ಇವತ್ತು ಅವಳ ಸೋದರಮಾವನ ಮನೆಯಲ್ಲಿ ಅವರ ಮೊಮ್ಮಗುವಿನ ನಾಮಕರಣದ ಸಮಾರಂಭವಿತ್ತು. ಮೂರು ದಿನಗಳಿಂದಲೇ ಅವಳು ಚಂದನನ ತಲೆ ತಿಂದಿದ್ದಳು ಕಾರ್ಯಕ್ರಮದ ಮಿನಿಟ್ಟು ಮಿನಿಟ್ ಪ್ರೋಗ್ರಾಂ ರೂಪಿಸಿ. ಸಂಜೆ ಹಾಗೇ ಸೆಂಟ್ರಲ್‌ಗೆ ಹೋಗಿ ಷಾಪಿಂಗ್ ಮುಗಿಸ್ಕೊಂಡು ಹೋಟೆಲಿನಲ್ಲಿ ಊಟ ಮಾಡಿ ಬರೋ ಪ್ರೋಗ್ರಾಂ ಕೂಡ ಹಾಕಿದ್ದಳು. ಅದಕ್ಕೇ ಸಂಜೆಗೆಂದು ಒಂದು ಜೊತೆ ಚೂಡಿದಾರ್ ಡ್ರೆಸ್ಸನ್ನು ರೆಡಿ ಮಾಡ್ಕೊಂಡು ಸಂಭ್ರಮದಿಂದ-` ರೀ, ನಾನು ರೆಡಿ' ಎಂದು ಜೋರಾಗಿ ಕೂಗಿ ಹೇಳಿದವಳಿಗೆ, ನಡುಮನೆಯಲ್ಲಿ ಪೇಪರ್ ಓದುತ್ತ ಕೂತಿದ್ದ ಚಂದನ್ `ನೀನು ರೆಡಿಯಾಗಿಬಿಟ್ರೆ ಆಯ್ತೇ...ನಿನ್ನ ಹೊರಗೆ ಬಿಡಲು ಈ ಮಳೆ ರೆಡಿಯಾಗಬೇಕಲ್ಲಾ?...ಸ್ವಲ್ಪ ಸಹನೆಯಿಂದ ಕಾಯಬೇಕಮ್ಮ, ನಿನ್ನ ಧಾವಂತಕ್ಕೆಲ್ಲ ಈ ಪ್ರಕೃತಿದೇವಿ ಕುಣಿಯಲ್ಲ, ಬೀ ಪೇಷೆಂಟ್..'- ಎಂದವನು ಪೇಪರಿನಿಂದ ತಲೆಯೆತ್ತದೆ ನುಡಿದ ಕೂಲಾಗಿ.

ಸ್ಮಿತಳ ಕೋಪ ಭಗ್ಗೆಂದು ಸಿಡಿಯಿತು. ಅನಿರೀಕ್ಷಿತ ಬಂದ ಹಾಳು ಮಳೆಯಿಂದ ಅವಳ ಉತ್ಸಾಹಕ್ಕೆ ಭಂಗವೊದಗಿತ್ತು. ಮಳೆಯ ಹನಿಗಳನ್ನು ತಿವಿಯುವಂತೆ ಕ್ರೂರವಾಗಿ ದಿಟ್ಟಿಸಿದಳು ಕರಿಮುಗಿಲ ಆಗಸವನ್ನು. `ಈ ಹಾಳುಮಳೆ ಇವತ್ತೇ ಬರಬೇಕೇ...' ಎನ್ನುತ್ತ ನಿಟ್ಟುಸಿರಿಕ್ಕಿ ಶತಪಥ ಹಾಕಿದಳು ಮುಂಬಾಗಿಲಿನಿಂದ ಹಿಂಬಾಗಿಲವರೆಗೆ. ಕ್ಷಣಕ್ಷಣಕ್ಕೂ ಮುಖದ ಮೇಕಪ್ಪು ಅಳಿಸಿಹೋಗುತ್ತಿರುವಂತೆ ಭಾಸವಾಗಿ ಚಡಪಡಿಸತೊಡಗಿದಳು. ಬಾಹ್ಯ ಪರಿವೆಯಿಲ್ಲದೆ ತನ್ನ ಪಾಡಿಗೆ ತಾನು ಪೇಪರ್ ಜಗತ್ತಿನಲ್ಲಿ ಮುಳುಗಿಹೋಗಿದ್ದ ಗಂಡನನ್ನು ಕಂಡು ಮೈ ಉರಿದುಹೋಯಿತು.

`ಮೊದ್ಲೇ ನಿಮಗೆ ಬರಕ್ಕೆ ಇಷ್ಟ ಇಲ್ಲ, ಜೊತೆಗೆ ಸೋಮಾರೀಗೆ ಹಾಸಿಗೆ ಹಾಸಿಕೊಟ್ಟಂತಾಯಿತು ಈ ಮಳೆಯ ನೆಪ...ಹೂಂ ಎಲ್ಲ ನನ್ನ ಗ್ರಾಚಾರ...ಅದೇ ನಿಮ್ಮ ಮನೆಯೋರ ಅಥ್ವಾ ನಿಮ್ ಫ್ರೆಂಡ್ಸ್ ಮನೆಗಳ ಫಂಕ್ಷನ್ ಆಗಿದ್ರೆ ಕುಣಿತಾ ಓಡ್ತಿದ್ರಿ...ನನ್ನ ಬಳಗ ಅಂದ್ರೆ ನಿಮಗೆ ಅಲಕ್ಷ್ಯ...'-ಎಂದು ಮುಖ ಊದಿಸಿ ಅವನೆದುರಿಗೆ ಬಂದು ಕುಳಿತಳು ಸರ್ವಾಲಂಕಾರಭರಿತೆ.

`ಹಾಳು ಮಳೆ...ಇದಕ್ಕೆ ಹೊತ್ತಿಲ್ಲ , ಗೊತ್ತಿಲ್ಲ...ಯಾವಾಗಂದ್ರೆ ಅವಾಗ ವಕ್ಕರಿಸತ್ತೆ...ನೀ ಬರ್ಲಿಲ್ಲಾಂತ ಯಾರು ಅತ್ತಿದ್ದು...ಥೂ ಶನಿ!!...' ಎಂದು ಮನಸಾರೆ ಮಳೆಗೆ ಶಾಪ ಹಾಕುತ್ತಿದ್ದ ವರಸೆ ಕಂಡು ಚಂದನ್- `ಇದೊಳ್ಳೆ ಚೆನ್ನಾಯ್ತಲ್ಲ, ನಿನ್ನ ಅಗತ್ಯಕ್ಕೆ ತಕ್ಕಂತೆ ಬಂದುಹೋಗೋ ಅಷ್ಟು ಅಗ್ಗ ಮಾಡ್ಕೋಬೇಡ ನಮ್ಮ ಮಳೆರಾಯನ್ನ...ಮಳೆಯಿಲ್ಲದೆ ಇಳೆಯುಂಟೇ?....ಅವನು ತರೋ ಹೊಸ ಸೃಷ್ಟಿ, ವಿಸ್ಮಯಗಳ ಬೆಲೆ ಗೊತ್ತೇನು ನಿಂಗೆ?...ಅವನ ಕೃಪೆ ಇಲ್ಲದ ನಾನು ನೀನು ಎಲ್ಲಿ?....ಅವನು ತರೋ ಮುದ, ಹದದಿಂದಲೇ ಈ ಜೀವದ್ರವ್ಯದ ಜಗತ್ತು, ಭಾವದ್ರವ್ಯದ ಜೀವನ, ಸೌಂದರ್ಯ ಎಲ್ಲಾ...ಇದೂ ಪ್ರಕೃತಿಯ ಒಂದು ಭಾಗ...ನಾವು ಮಳೇನ ಸ್ವಾಗತಿಸಬೇಕೇ ಹೊರತು ಹೀಗೆ ಹಳಿಯಬಾರದು'- ಗಂಭೀರವಾಗಿ ಉಪನ್ಯಾಸ ನೀಡಲಾರಂಭಿಸಿದ. ಸ್ಮಿತಾ ಅವಾಕ್ಕಾಗಿ ಕುಳಿತಿದ್ದಳು!!...

`ಇದೇನ್ರೀ ಇದ್ದಕ್ಕಿದ್ದ ಹಾಗೆ ಕವಿ ಥರ ಮಾತಾಡ್ತಿದ್ದೀರಾ... ದೊಡ್ಡ ದಾರ್ಶನಿಕನಂತೆ ಪ್ರವಚನ ಕೊಡಕ್ಕೇ ಶುರು ಮಾಡಿದ್ರಲ್ಲ!...ಓ ಮೈ ಗಾಡ್...ಮಳೆಯ ಮಹತ್ವದ ಬಗ್ಗೆ ಲೆಕ್ಚರ್ ಕೊಡೂಂತ ಯಾರು ನಿಮಗೆ ಹೇಳಿದ್ದು?...ನೀವೇನೆ ಅನ್ನಿ, ಸದ್ಯದ ಪರಿಸ್ಥಿತೀಲಿ ಈ ಮಳೆ ನನ್ನ ಎನಿಮಿ, ಮೈಂಡ್ ಇಟ್'-ಎಂದು ಗುಡುಗಿದಳು.

ಅವಳ ಅಬ್ಬರದ ದನಿಗೆ ಚಂದನನಿಗೆ ಜ್ಞಾನೋದಯವಾದಂತಾಯಿತು.ಮಳೆಯ ರಾದ್ಧಾಂತದಿಂದ ಅವಳಿಗುಂಟಾಗಿರುವ ನಿರಾಸೆ ಅರಿವಿಗೆ ಬಂದು, ಭರ್ಜರಿಯಾಗಿ ಮಾಡಿಕೊಂಡ ಅವಳ ಅಲಂಕಾರ ಕಂಡು ಪಾಪ ಅಂತ ಅನಿಸಿತವನಿಗೆ. ಸಂಜೆ ಷಾಪಿಂಗ್‌ಗೂ ಸೇರಿದಂತೆ ಪೂರ್ತಿ ರೆಡಿಯಾಗಿ ಬಿಟ್ಟಿದ್ದಾಳೆ!...

ಮುಂದಿನ ಪುಟ ನೋಡಿ ...

ಕೊಂಚ ಸಮಾಧಾನದ ದನಿಯಿಂದ- `ನೋಡೋಣ ತಡಿ, ನಿಲ್ಲಬಹುದು' ಎಂದು ಪುಟ ತಿರುವಿದ. ಅವನ ಬಾಯಹಾರೈಕೆಯೆಂಬಂತೆ ಹೊರಗೆ ಮಳೆಹನಿಯ ಪಟಪಟ ಸದ್ದು ಕೊಂಚ ಕ್ಷೀಣವಾದಂತೆನಿಸಿ ಸ್ಮಿತಾ ಖುಷಿಯಿಂದ ಮೇಲೇಳಕ್ಕೂ ಹೊರಗಿನಿಂದ ಜೋರಾಗಿ ಕಾಲಿಂಗ್‌ಬೆಲ್ ರಿಂಗಣಿಸೋದಕ್ಕೂ ಸಮವಾಯಿತು. `ಯಾರೂ?' ಎಂದು ಅಸಮಾಧಾನದ ದನಿಯಲ್ಲಿ ಸ್ವರ ಹೊರಡಿಸುತ್ತ ಅವಳು ಮುಂಬಾಗಿಲತ್ತ ಧಾವಿಸಿದಳು.

` ಹೂಂ ಈ ಮಳೆಯಲ್ಲೂ ಸೇಲ್ಸ್ ನವರ ಕಾಟವೇ?' ಎಂದು ಗೊಣಗುತ್ತ ಬಾಗಿಲು ತೆರೆದಳು.

ಮಳೆಯಿಂದ ತೊಯ್ದ ಮುಂಬಾಗಿಲ ಮೆಟ್ಟಿಲ ಮೇಲೆ ಅಪರಿಚಿತ ವ್ಯಕ್ತಿ!

`ಯಾರು ಬೇಕಿತ್ತು?' ಅವಳ ಹುಬ್ಬುಗಳು ತಟ್ಟನೆ ಬೆಸೆದುಕೊಂಡವು. ಸೇಲ್ಸ್ ನವರಂತೂ ಅಲ್ಲ. ಯಾರೋ ಹಳ್ಳಿಗಮಾರನಂತೆ ಕಂಡನವನು. ಅಥವಾ ಕೂಲಿಯವನೋ? ಹಣಸಹಾಯ ಕೇಳಲು ಬಂದವನೋ...ತಿಳಿಯಲಿಲ್ಲ. ಅಷ್ಟೇನು ಬಿಳಿಯದ್ದಲ್ಲದ ಸಾಧಾರಣ ನೂಲಿನ ಪಂಚೆ, ಬಣ್ಣಗೆಟ್ಟ ಕಂದುಬಣ್ಣದ ಷರಟು, ನಯವಾಗಿ ಬಾಚಿಲ್ಲದ ದಟ್ಟಗೂದಲು. ಸುಮಾರು ಮೂವತ್ತರ ಆಸುಪಾಸಿನ ವಯಸ್ಸಿರಬಹುದು. ಅವಳನ್ನು ಕಂಡೊಡನೆ ಅಷ್ಟೂ ಹಲ್ಲು ಬಿಚ್ಚಿ ಹಲ್ಕಿರಿದಃ

`ಅವ್ರಾ?...'

`ಯಾರು?!' ಒರಟಾಗಿತ್ತು ಅವಳ ದನಿ. ಮುಖ ಗಂಟಾಗಿತ್ತು. `ಇದ್ಯಾವ ಪೀಡೆ ಬೆಳಬೆಳಗ್ಗೆ...ಭಿಕ್ಷುಕನಾ?' ಎಂದುಕೊಂಡು ಅವನ ಮುಖವನ್ನೇ ಕೋಪದಿಂದ ದುರದುರನೆ

ದಿಟ್ಟಿಸಿ ನೋಡಿದಳು.

ಅವನ ಹಲ್ಕಿರಿದ ಬಾಯಿ ಹಾಗೇ ಅಗಲವಾಗಿ ತೆರೆದುಕೊಂಡೇ ಇತ್ತು. `ಏನ್ಬೇಕಿತ್ತು?'

`ಚಂದಪ್ಪ ಇಲ್ವಾ?...ಇಗಳ್ಳಿ, ಈ ಇಳಾಸ ನೋಡ್ರೀ...ಅವನೇ ಬರ್ಕೊಟ್ಟಿದ್ದು' - ಎಂದು ಷರಟಿನ ಮೇಲುಜೇಬಿನಿಂದ ಮುದುರಿದ ಸಣ್ಣಕಾಗದವೊಂದನ್ನು ತೆಗೆದು ಅವಳ ಮುಂದೆ ಚಾಚಿದ. ಅದನ್ನು ಬಿಚ್ಚಿ ನೋಡುವ ಸಹನೆ ಸ್ಮಿತಳಿಗೆ ಇರಲಿಲ್ಲ. ತನ್ನ ಇಡೀ ದಿನದ ಕಾರ್ಯಕ್ರಮಾನೆಲ್ಲ ಹಾಳುಮಾಡಿದ ಸುಡುಗಾಡು ಆಕಾಶದತ್ತ ಅವಳ ಗಮನವೆಲ್ಲ.

`ಯಾರು...ಶಂಕರನ ದನಿ ಇದ್ದ ಹಾಗಿದೆಯಲ್ಲ?!' ಎನ್ನುತ್ತ ಒಳಗಿನಿಂದ ಬಂದ ಚಂದನ್, ಹೊರಗೆ ಮೆಟ್ಟಿಲ ಮೇಲೆ ನಿಂತಿದ್ದ ತನ್ನ ಬಾಲ್ಯಸ್ನೇಹಿತ ಶಂಕರನನ್ನು ಕಂಡು

ಅಪರಿಮಿತ ಖುಷಿಯಿಂದ `ಓ...ಶಂಕ್ರೂ....ಬಾರಯ್ಯ ಬಾ...ಬಾ...' ಎನ್ನುತ್ತ ಬಾಗಿಲಿಗಡ್ಡವಾಗಿ ನಿಂತಿದ್ದ ಹೆಂಡತಿಯನ್ನು ಸರಿಸಿ, ಮುಂದಡಿಯಿಟ್ಟು, ಶಂಕರನ ಮುಂಗೈ ಹಿಡಿದು ಒಳಗೆ ಕರೆತಂದ ಮುಖವರಳಿಸಿ. ಅಪರೂಪದ ಗೆಳೆಯನ ಆಗಮನ ಹಿಗ್ಗನ್ನು ತಂದಿತ್ತವನಿಗೆ.

ಅವನು ಚಪ್ಪಲಿಯನ್ನು ಹೊರಗೆ ಕಳಚಲೂ ಅವಕಾಶ ಕೊಡದೆ ಅವನನ್ನು ಸೀದಾ ಹಾಲಿಗೆ ಕರೆತಂದು ಬಿಳಿಕವರ್ ಹಾಸಿದ್ದ ಸೋಫದ ಮೇಲೆ ಕೂರಿಸಿದ. ಶುಭ್ರವಾಗಿದ್ದ ವರಾಂಡದ ಬಿಳಿ ಟೈಲ್ಸಿನ ಮೇಲೆ ಕೆಸರಿನ ಹೆಜ್ಜೆಗಳನ್ನು ಕಂಡು ಸ್ಮಿತಳಿಗೆ ರೇಗಿ ಹೋಯ್ತು. ಹಾಲಿನ ರತ್ನಗಂಬಳಿಯ ಮೇಲೂ ಒಂದೆರಡು ಹೆಜ್ಜೆಗಳು ಮೂಡಿದ್ದವು. ಅವಳ ಕೆಂಗಣ್ಣಿನ ದೃಷ್ಟಿಯನ್ನನುಸರಿಸಿದ ಶಂಕರನ ಕಣ್ಣುಗಳು ಸಂಕೋಚದಿಂದ ಕಿರಿದುಗೊಂಡು, `ಬುಡು, ಚಂದಪ್ಪ, ಚಪ್ಲಿಗೆಲ್ಲ ಕೆಸರು ಮೆತ್ಕೊಂಡಾವೆ, ಒರಗ್ ಬುಟ್ಬುಬರ್ತೀನಿ' ಎನ್ನುತ್ತ ಮೇಲೆದ್ದು, ಹಗುರವಾಗಿ ಹೆಜ್ಜೆಯಿಡುತ್ತ, ಬಾಗಿಲ ಹೊರಗೆ ಎಕ್ಕಡ ಕಳಚಿ, ಫುಟ್ ರಗ್ಗಿಗೆ ಕಾಲನ್ನು ಚೆನ್ನಾಗಿ ಉಜ್ಜಿ, ಮುದುರಿಕೊಂಡು ಸೋಫದ ಮೇಲೆ ಬಂದು ಕುಳಿತ. ಆದರೂ ಅವಳ ದೃಷ್ಟಿಯೆಲ್ಲ ಅವನ ಒಡೆದ ಹಿಮ್ಮಡಿಯ ಕೊಳೆಯ ಕಾಲುಗಳ ಮೇಲೆಯೇ ಇತ್ತು.

ಚಂದನನಿಗೆ ಹಳ್ಳಿಯ ಗೆಳೆಯನನ್ನು ಕಂಡು ಮುಖವರಳಿ, ಅವನ ಹೆಗಲ ಮೇಲೆ ಕೈ ಬಳಸಿ, ಸಣ್ಣಗುದ್ದು ಹಾಕುತ್ತ `ಶಂಕ್ರೂ, ಹೇಗಿದ್ದೀಯೋ ಮರಾಯಾ...ಹಳ್ಳೀಲಿ ನಿಮ್ಮಪ್ಪ ಅಮ್ಮ ಎಲ್ಲ ಚೆನ್ನಾಗಿದ್ದಾರೇನೋ.....ನಿನ್ನಣ್ಣ ಸೀನಪ್ಪನಿಗೆ ಎಷ್ಟು ಮಕ್ಳು...ಮಳೆ,ಬೆಳೆ ಎಲ್ಲ ಹೇಗಿದೆ' ಎನ್ನುತ್ತ ತುಂಬ ಆಸಕ್ತಿ ತೋರುತ್ತ ಉದ್ದಕ್ಕೆ ಪ್ರಶ್ನೆಯ ಮೇಲೆ ಪ್ರಶ್ನೆ ಕೇಳಿದ.

ಅವನ ಉತ್ತರ ಕೇಳುವುದಿರಲಿ, ಚಂದನ್ ಮಳೆ ಎನ್ನುತ್ತಿದ್ದ ಹಾಗೆ ಸ್ಮಿತಳಿಗೆ ತಟ್ಟನೆ ಮಳೆಯ ನೆನಪಾಗಿ ಕಿಟಕಿಯ ಬಳಿ ಧಾವಿಸಿ, ಹೊರಗೆ ದೃಷ್ಟಿ ತೂರಿಸಿ `ರೀ, ಮಳೆ ನಿಂತಿದೆ' ಎಂದಳು ಸಂಭ್ರಮದಿಂದ, ಮೆಲ್ಲಗೆ ಏನೋ ಕಿರುಗಣ್ಣಲ್ಲಿ ಸೂಚಿಸುತ್ತ.

ಚಂದನ್, ಆರಾಮವಾಗಿ ಗೆಳೆಯನೊಡನೆ ಹರಟುತ್ತ-` ಅಂದ್ಹಾಗೆ ಸ್ಮಿತಾ, ಇವನು ನನ್ ಚಡ್ಡಿದೋಸ್ತ್ ಶಂಕ್ರೂಂತ...ನಮ್ತಂದೆಗೆ ಊರೂರಿಗೆ ಟ್ರಾನ್ಸ್‌ಫರ್ ಆಗ್ತಿದ್ದಾಗ ನಾನು ಹಳ್ಳೀಲಿ ನಮ್ಮಜ್ಜಿ ಮನೇಲಿದ್ದೆ ಅಂತ ಹೇಳಿದ್ನಲ್ಲ, ಅಲ್ಲಿ ನಾವಿಬ್ರು ಒಬ್ಬರನ್ನೊಬ್ರು ಬಿಟ್ಟಿರ್ತಲೇ ಇರ್ಲಿಲ್ಲ ಅಷ್ಟು ಜಿಗ್ರಿದೋಸ್ತ...ಬೆಳಗ್ಗಿಂದ ರಾತ್ರೀವರ್ಗೂ, ಸ್ಕೂಲ್ ಬಿಟ್ಮೇಲೆ, ರಜಗಳ ದಿವಸಗಳಲ್ಲಿ ಆಟದ ಬಯಲು ಬಿಟ್ರೆ, ಪಟೇಲರ ಮಾವಿನ ತೋಪು, ಇಲ್ಲ ಆಲೆಮನೆ, ಇಲ್ಲ ಹೊಳೇಲಿ ಈಜ್ತಾ ಇರೋದು...ನಮ್ಮ ಉಂಡಾಡಿ ಗುಂಡ್ತನದ ಅಲೆದಾಟಕ್ಕೆ ಮನೇಲಿ ಏಟು ತಿನ್ತಾ ಇದ್ದಿದ್ದಕ್ಕೂ ಲೆಕ್ಕ ಇಲ್ಲ ಅನ್ನು...' ಎಂದು ಬಾಲ್ಯದ ದಿನಗಳನ್ನು ನೆನೆಸಿಕೊಳ್ತಾ ಜೋರಾಗಿ ನಕ್ಕವನು, ತತ್‌ಕ್ಷಣ-` ಸ್ಮಿತಾ ಒಂದ್ಲೋಟ ಸ್ಟ್ರಾಂಗ್ ಕಾಫಿ ಮಾಡ್ಕೊಂಡು ಬಾ ಹೋಗು...ಅಪರೂಪಕ್ಕೆ ಗೆಳೆಯ ಬಂದಿದ್ದಾನೆ..' ಎಂದು ನುಡಿದು, ಅವನತ್ತ ಹೊರಳಿ `ಮತ್ತೇನಯ್ಯ ಸಮಾಚಾರ?' ಎಂದು ಲಹರಿಯಿಂದ ಅವನೊಡನೆ ಹರಟೆಗೆ ತೊಡಗಿದ.

ಮುಂದಿನ ಪುಟ ನೋಡಿ ...

ಸ್ಮಿತಳ ಮುಖ ಗಡಿಗೆಯಾಯಿತು. ಮಳೆ ನಿಂತ ಸಂತೋಷ ಮಾಯವಾಗಿತ್ತು. ತನ್ನ ಕೆಳದುಟಿಯನ್ನು ಕಚ್ಚಿಕೊಳ್ಳುತ್ತ ಅಡುಗೆಮನೆಯತ್ತ ದಾಪುಗಾಲಿಕ್ಕಿ, ಈಗಾಗಲೇ ಒಮ್ಮೆ ಇಳಿದಿದ್ದ ಕಾಫೀಪುಡಿಯ ಮೇಲೆ ಮತ್ತಷ್ಟು ನೀರು ಫಿಲ್ಟರಿಗೆ ಸುರಿದು ಸ್ವಿಚ್ ಹಾಕಿದಳು. ಎರಡನೇ ಸಲ ಇಳಿದ ನೀರು ಡಿಕಾಕ್ಷನ್‌ಗೆ ಹಾಲು ಬೆರೆಸಿ `ಈ ಹಳ್ಳಿಜನಕ್ಕೆ ಸಕ್ಕರೆ ಜಾಸ್ತಿ ಹಾಕ್ಬಿಟ್ರೆ ಏನೂ ತಿಳಿಯಲ್ಲ' ಎಂದು ಗುನುಗುನಿಸಿಕೊಳ್ಳುತ್ತ ಕಾಫಿ ಕಾಯಿಸಿ ದೊಡ್ಡಲೋಟಕ್ಕೆ ಸುರಿದು ಅವನ ಮುಂದೆ ತಂದಿಟ್ಟಳು.

ಶಂಕ್ರು ಸಂಕೋಚದ ಯಾವ ನುಡಿಗಳ್ಳನ್ನೂ ಆಡದೆ ಲೋಟವನ್ನು ಮೇಲೆತ್ತಿ ಗಟಗಟನೆ ಕುಡಿದಿಟ್ಟ.

ಅರ್ಧಗಂಟೆ ಕಳೆಯಿತು. ಅವನು ಕದಲುವ ಸೂಚನೆಯೇ ಕಾಣದಾದಾಗ ಸ್ಮಿತಾ, ಗಂಡನ ಮುಂದೆ ಎರಡು ಮೂರು ಬಾರಿ ಹಾದು ಹೋಗುತ್ತ ಗೋಡೆ ಗಡಿಯಾರದತ್ತ ಅವನ ಗಮನ ಸೆಳೆದಳು.

ಮಳೆ ಸಂಪೂರ್ಣ ನಿಂತಿತ್ತು. ಅವಳ ಚಡಪಡಿಕೆಯನ್ನು ಅರ್ಥಮಾಡಿಕೊಂಡರೂ ಚಂದನ್ ನಿರೂಪಾಯನಾಗಿ ಸೋಫದ ಮೇಲೆ ಮಗ್ಗುಲು ಬದಲಿಸಿದ. ಆದರೆ ಶಂಕ್ರು ಮಾತ್ರ ವಿರಾಮವಾಗಿ ಹರಟುತ್ತಲೇ ಕುಳಿತಿದ್ದ.

ಹೈಸ್ಕೂಲ್ ಮೊದಲವರ್ಷದಲ್ಲೇ ಚಂದನನ ಅಪ್ಪನಿಗೆ ಬೆಂಗಳೂರಿಗೆ ವರ್ಗವಾಗಿ, ತಾತನ ಮನೆಯಲ್ಲಿದ್ದ ಅವನನ್ನು ಕರ್ಕೊಂಡುಬಂದು ಇಲ್ಲಿ ಶಾಲೆಗೆ ಸೇರಿಸಿದಲಾಗಾಯ್ತು ಅವರಿಬ್ಬರ ಗೆಳೆತನ ಕಡಿದುಹೋಗಿತ್ತು. ಆದರೆ ಆಗೀಗ ರಜೆಗೆ ಹಳ್ಳಿಗೆ ಹೋಗುತ್ತಿದ್ದ ಅವನಿಗೆ ಶಂಕ್ರು ಸಿಕ್ಕರೂ ಬಿಡುವಾಗಿ ಮಾತನಾಡಲು ಆಗುತ್ತಿರಲಿಲ್ಲ. ಅನಂತರ ಚಂದನ್ ಕಾಲೇಜಿನಲ್ಲಿ ಡಿಗ್ರಿ ಮುಗಿಸಿ, ಇನ್ನೂ ಮುಂದಕ್ಕೆ ಓದಿ ಕೆಲಸಕ್ಕೆ ಸೇರಿ ಬಿಜಿಯಾಗಿಬಿಟ್ಟಿದ್ದ. ಆದರೆ ಶಂಕ್ರು ಮಾತ್ರ ಹತ್ತನೇ ಕ್ಲಾಸಿನವರೆಗೂ ಬರಲೇಇಲ್ಲ.ಅಪ್ಪನ ಜಮೀನಿನಲ್ಲಿ ಗೇಯುತ್ತ, ವ್ಯವಸಾಯದ ಕೆಲಸದಲ್ಲಿ ಸಂಪೂರ್ಣ ತೊಡಗಿಸಿಕೊಂಡ. ಅದೇ ಅವನ ಬದುಕಾಯ್ತು. ಬಹಳ ಆಸಕ್ತಿ-ಶ್ರದ್ಧೆಯಿಂದ ದುಡಿಯುತ್ತ, ವ್ಯವಸಾಯದ ಹೊಸ ವಿಧಾನ, ಮಾದರಿಗಳ ಬಗ್ಗೆ ಅನ್ವೇಷಣೆ, ಇಲಾಖೆಯ ಪ್ರವಾಸ, ಆಧ್ಯಯನವೆಂದು ಬೇರೆ ಬೇರೆ ಊರುಗಳಿಗೆ ಪ್ರವಾಸವೆಂದು ಸುತ್ತಾಡುತ್ತಿದ್ದ ಕಾರಣ ಗೆಳೆಯರಿಬ್ಬರ ಭೇಟಿ ಅಲ್ಲೊಂದು ಇಲ್ಲೊಂದು ಸಲವಷ್ಟೇ. ಅದೂ ಅಜ್ಜಿ-ತಾತ ಕಾಲವಾದ ಮೇಲೆ ಚಂದನ್ ಹಳ್ಳಿಗೆ ಹೋಗುವುದನ್ನೇ ಬಿಟ್ಟಿದ್ದ. ತನ್ನ ಮದುವೆಯ ಕರೆಯೋಲೆಯನ್ನು ಮರೆಯದೆ ಶಂಕ್ರುಗೆ ಪೋಸ್ಟ್ ನಲ್ಲಿ ಕಳಿಸಿದ್ದ. ಮದುವೆಗೆ ಅವನು ಬರಲಿಲ್ಲ. ಈಗ ವರ್ಷ ಕಳೆದ ಮೇಲೆ ಬಂದಿದ್ದಾನೆ ಶಂಕ್ರು, ಅದೂ ಮನೆ ಹೇಗೋ ಪತ್ತೆ ಮಾಡಿಕೊಂಡು.

ಅವನನ್ನು ಕಂಡು ಚಂದನನಿಗೆ ನಿಜವಾಗಿ ತುಂಬ ಖುಷಿಯಾಗಿದ್ದರೂ ಇಂದು ಹೆಂಡತಿಯ ಬಂಧುಗಳ ಮನೆಯ ಸಮಾರಂಭಕ್ಕೆ ಹೋಗಲೇಬೇಕಾದ ದಿನ ಇವನು ಬಂದಿರುವುದು ಕೊಂಚ ಮುಜುಗರವೆನಿಸಿ, ಆ ಗಳಿಗೆಗೆ ಅವನು ಬೇಡದ ಅತಿಥಿಯೆನಿಸಿದರೂ ಗಂಟೆ ಕಾಲ ಅವನೊಡನೆ ಹರಟಿದ್ದಾಯ್ತು. ` ಯಾವಾಗ ಬಂದ್ಯೋ ಹಳ್ಳಿಯಿಂದ, ತಿಂಡಿ ಆಯ್ತಾ' ಎಂದು ಬಿಟ್ಟ ಬಾಯಿತಪ್ಪಿ. ಅದಕ್ಕೆ ಶಂಕ್ರು ಜೋರಾಗಿ ಅಡ್ಡಡ್ಡಲಾಗಿ ತಲೆಯಾಡಿಸಿ, `ಇಲ್ಲಪ್ಪ, ದಿನ ಏನಾರ ಒಂದ್ಕೆಲಸ ಇದ್ದೇ ಇರತ್ತೆ, ಅದಕ್ಕೆ ನಿನ್ನ ಮದುವೆಗಂತೂ ಬರಕ್ಕಾಗಲಿಲ್ಲ, ಆದಿತ್ಯವಾರ ನೀನು ಮನೇಲಿ ಇದ್ದೇ ಇರ್ತೀಯಾಂತ ಒತ್ತಾರೇನೆ ಎದ್ದುಬುಟ್ಟು ಸೀದಾ ಇಲ್ಲಿಗೇ ಬಂದೆ' ಎಂದುಬಿಡೋದೇ.

ಸ್ಮಿತಾಗೆ ಎದೆ ಒಡೆದ ಹಾಗಾಯ್ತು!...ಬೇರೆ ದಾರಿ ಇಲ್ಲದೆ ಚಂದನ್ ತಗ್ಗಿದ ಸ್ವರದಲ್ಲಿ- `ಸ್ಮಿತಾ...ನನಗೂ ಹೊಟ್ಟೆ ಹಸೀತಿದೆ, ಅಲ್ಲಿಗೆ ಹೋಗೋದು ಲೇಟಾಗಬೋದು, ಸ್ವಲ್ಪ ಏನಾದ್ರೂ ತಿಂಡಿಮಾಡ್ಬಿಡು' ಎಂದು ಫರ್ಮಾನು ಹೊರಡಿಸಿದ.

ಸ್ಮಿತಾ ಕಾದ ಕಬ್ಬಿಣವಾದಳು. ಧಡಬಡ ಬೆಡ್‌ರೂಮಿಗೆ ನುಗ್ಗಿದೋಳೆ ಕೋಪದಿಂದ ಮೂಗಿನ ಹೊಳ್ಳೆಗಳನ್ನರಳಿಸಿ, ತಾನುಟ್ಟ ಹೊಸ ಸೀರೆಯನ್ನು ಮಂಚದ ಮೇಲೆ ಬಿಚ್ಚೊಗೆದು, ತುಟಿ ಕಚ್ಚಿ ಒಲ್ಲದ ಮನಸ್ಸಿನಿಂದ ಅಡುಗೆ ಮನೆಗೆ ನಡೆದಳು. ಮನಸ್ಸು ಅಸಮಾಧಾನದಿಂದ ಕುದಿಯುತ್ತಿತ್ತು. `ಎಲ್ಲಿಂದ ವಕ್ಕರಿಸಿತು ಈ ಶನಿ?!...ಬೆಳಗ್ಗೆಯೆಲ್ಲ ಆ ಮಳೆಯಾಯ್ತು, ಈಗ ಈ ಜಡಿಮಳೆ' ಎಂದು ಬಯ್ದುಕೊಳ್ಳುತ್ತ ಒಲೆಯ ಮೇಲೆ ಬಾಣಲೆ ಇಟ್ಟು ರವೆ ಹುರಿದು ಒಂದು ಉಪ್ಪಿಟ್ಟೂಂತ ಕೆದಕಿ, ಹೊರಗೆ ಕುಳಿತ ಮಹಾಶಯನ ಮಂದೆ ಹೋಗಿ ಬಡಿದಳು.

` ಕಾಲ್ಗೆಲ್ಲ ಕೆಸರು ಮೆತ್ತದೆ, ಒಸಿ ಕಾಲು ತ್ವಳ್ಕಾತೀನಿ, ನೀರ್ಮನೆ ಎಲ್ಲದೆ ಚಂದಪ್ಪ?' ಎಂದವನಿಗೆ ಚಂದನ್ ಮೌನವಾಗಿ ಬಾತ್‌ರೂಂ ತೋರಿದ. ನಡುಮನೆಯಿಂದ ಬಚ್ಚಲಮನೆವರೆಗೂ ಕೆಸರ ಹೆಜ್ಜೆಯ ರಂಗೋಲಿ!...ಸ್ಮಿತಾ ಮೌನವಾಗಿ ಮುಲುಕಿದಳು. ತತ್‌ಕ್ಷಣ ಒಳಗಿಂದ ಧಬಧಬೆ ನೀರು ಹುಯ್ದ ಸಪ್ಪಳ ಕೇಳಿ ಸ್ಮಿತಾ ಅತ್ತ ಓಡಿದಳು. ಹೊಸ್ತಿಲಿಲ್ಲದ ಬಾತ್‌ರೂಮಿನಿಂದಾಚೆ ತಂಬಿಗೆಯಷ್ಟು ನೀರು ಪ್ಯಾಸೇಜಿನುದ್ದ ಹರಿದುಬಂದುದನ್ನು ಕಂಡು ಅವಳ ಕೋಪ ತಾರಕ್ಕೇರಿತು. ಆಡೋ ಹಾಗಿಲ್ಲ, ಅನುಭವಿಸೋ ಹಾಗಿಲ್ಲ. ಗಂಡನನ್ನು ನೋಟದಲ್ಲೇ ತಿವಿದಳು. ಚಂದನನೂ ಗಲಿಬಿಲಿಗೊಂಡಿದ್ದ. `ಬೇಗ ಸಾಗಿ ಹಾಕ್ರೀ ನಿಮ್ಮ ಈ ಫ್ರೆಂಡನ್ನಾ' ಎಂದು ಗುಡುಗಿದಳು ಅವನ ಕಿವಿಯಲ್ಲಿ. ಅದರವನು ಅಸಹಾಯಕನಾಗಿ ಮೌನಕ್ಕೆ ಶರಣು ಹೋಗಿದ್ದ. ಮತ್ತೆ ಒದ್ದೆ ಹೆಜ್ಜೆಗಳು ಹಿಂತಿರುಗಿದವು.

ತಿಂಡಿ ಆಯಿತು. ಊಟದ ಸಮಯವೂ ಸಮೀಪಿಸುತ್ತಿತ್ತು. ಸ್ಮಿತಾ, ಜಪ್ಪಯ್ಯ ಅಂದ್ರೂ ಮತ್ತೆ ಅಡುಗೆಮನೆಗೆ ಹೋಗಲ್ಲಾಂತ ಶಪಥ ಮಾಡಿ, ಮುಖ ಬಾತಿಸಿಕೊಂಡು ರೂಂ ಬಾಗಿಲು ಹಾಕಿಕೊಂಡು ಮಲಗಿಬಿಟ್ಟಳು.

ಮುಂದಿನ ಪುಟ ನೋಡಿ ...

ಅಪ್ರಯತ್ನವಾಗಿ ಅವಳ ದೃಷ್ಟಿ ಕಿಟಕಿಯಾಚೆ ಹರಿದಾಗ, ಮೋಡಗಳಿಲ್ಲದ ಶುಭ್ರ ಆಕಾಶ ಕಂಡವಳ ಆಕ್ರೋಶ, ಸಿಡಿಲು ಗುಡುಗುಗಳೊಂದಿಗೆ ಮುಗಿಲು ಮುಟ್ಟಿತ್ತು. ನಿರಾಸೆಯ ನೋವಿನಿಂದ ಕಣ್ಣು ಹನಿಹನಿಯಾಗಿ ಮಳೆಗರೆಯಿತು.

`ಓ ಗಂಟೆ ಎರಡಾಯ್ತು ಚೆಂದಪ್ಪ...ನಿನ್ ಲಗ್ನಕ್ಕಂತೂ ಬರ್ನಿಲ್ಲ....ಊಟ ಬಲು ಜೋರಿತ್ತಾ?...ಸರಿ, ಇವತ್ತೇನ್ ಸ್ಪೆಸಲ್ಲು ನಿಮ್ಮನ್ಯಾಗೆ ?' ಎಂದು ಶಂಕ್ರೂ ನೇರವಾಗೇ ಕೇಳಿದಾಗ ಚಂದನ್ ಮೆಟ್ಟಿಬಿದ್ದ ಗಾಬರಿಯಿಂದ.

ಆದರೂ ಸಾವರಿಸಿಕೊಂಡು-`ನಮ್ಮನೇಲಿ ಅಂಥದ್ದೆಲ್ಲ ಏನಿರಲ್ಲಪ್ಪ...ಆದರೂ ಸಿಂಪಲ್ಲಾಗಿ ಒಂದು ಅನ್ನ-ಸಾರು, ಪಲ್ಯ ಮಾಡಿಸ್ತೀನಿ ಬಿಡು' ಎಂದ ಅಳುಕುತ್ತಲೇ. ಇದಕ್ಕೆ ಹೆಂಡತಿ ಮಾಡಬಹುದಾದ ರಾದ್ಧಾಂತ ನೆನೆದು ನಡುಗಿಹೋದ ಒಳಗೊಳಗೇ. ಈ ಶಂಕ್ರೂ ಭಂಡ, ಕೂತರೂ ಕೂತುಬಿಟ್ಟನೇ ಸಂಜೆವರೆಗೂ, ಎಂದು ನೆನೆಸಿಕೊಂಡ ಚಂದನ್ ಮುಚ್ಚಿದ ಬಾಗಿಲತ್ತ ಅಳ್ಳೆದೆಯಿಂದ ದಿಟ್ಟಿಸಿದ.

ಶಂಕ್ರೂವಿನ ಮೊಗದಲ್ಲಿ ಸಣ್ಣ ನಗೆ ಸುತ್ತಿ, ಮೆಲ್ಲನೆ ಮೇಲೇಳುತ್ತ, `ಅವೆಲ್ಲ ಏನು ಬೇಡಬುಡು ಚೆಂದಪ್ಪ....ಈಗ ನಂಗೊಸಿ ಕೆಲ್ಸೃತೆ ಪ್ಯಾಟೇಗೆ...' ಎನ್ನುತ್ತ ದೇಶಾವರಿ ನಗೆ ಬೀರಿದಾಗ, ಚಂದನನಿಗೆ ಖಚಿತವಾಯ್ತು ಅವನಿಗೇನೋ ಹಣ ಕಡಮೆ ಬಿದ್ದಿದೆ, ಅದಕ್ಕೆ ದುಡ್ಡು ಕೇಳೋಕ್ಕೆ ಇಲ್ಲಿಗೆ ಬಂದಿದ್ದಾನೇಂತ. ಆಗಿದ್ದಾಗಲಿ ಅಂತ ಮನಸ್ಸು ಗಟ್ಟಿ ಮಾಡಿಕೊಂಡು ನಗಲೆತ್ನಿಸಿದ.

` ನಿಮ್ಮೆಂಗಸ್ರೂ ಒಳಗೆ ಓಗಿ ಮನಿಕೊಂಡಂಗದೆ?' ಎಂದು ಅವನು ಕೇಳಿದಾಗ, ಗಂಭೀರಮುಖ ಮಾಡಿಕೊಂಡು ಚಂದನ್ `ಹೌದು, ಅವಳಿಗೆ ಸ್ವಲ್ಪ ಮೈಹುಷಾರಿಲ್ಲ' ಎಂದ ತಟ್ಟನೆ. ಅವನ ಸಹನೆಯೂ ಆವಿಯಾಗತೊಡಗಿತ್ತು.

`ಸರಿ ಕಣ್ ಚಂದಪ್ಪ, ನಿನ್ ಲಗ್ನಕ್ಕೆ ಬರಕ್ಕಾಗ್ಲಿಲ್ಲ, ಬ್ಯಾಸರ ಮಾಡ್ಕೋಬ್ಯಾಡ...ಸೆಂದಾಕಿದ್ದೀಯಲ್ಲ?,,,ಒಂದಪ ಹಳ್ಳೀ ಕಡೆ ಬಾ ಮತ್ತೆ' ಎನ್ನುತ್ತ ತನ್ನ ಪಂಚೆ ಮೇಲೆತ್ತಿ ಚೆಡ್ಡಿಯ ಒಳಜೇಬಿಗೆ ಕೈ ಹಾಕಿ ಒಂದು ಕಾಗದದ ಸಣ್ಣ ಪೊಟ್ಟಣವನ್ನು ಹೊರತೆಗೆದು ಅವನ ಕೈಲಿಡುತ್ತ,-` ಬತ್ತೀನಪ್ಪ...ನಿನ್ ಎಂಡ್ರುಗೂ ಏಳ್ಬುಡು...' ಎಂದು ಮುಂಬಾಗಿಲು ದಾಟಿ ಗೇಟು ತೆರೆದ.

ಚಂದನ್ ಅಷ್ಟರಲ್ಲೇ ಅವನಿತ್ತ ಪೊಟ್ಟಣವನ್ನು ಬಿಚ್ಚಿ ನೋಡಿದವನೆ ಗಾಬರಿಯಾಗಿ-` ಏಯ್ ಏನಪ್ಪ ಇದೆಲ್ಲ?' ಎಂದವನ ಮೊಗದಲ್ಲಿ ಗೆಳೆಯನ ಉಡುಗೊರೆ ಕಂಡು ನಾಚಿಕೆ ಒಸರಿತ್ತು. ಕೈಲಿದ್ದ ಕಾಗದದ ಪೊಟ್ಟಣದಲ್ಲಿ ಥಳಥಳನೆ ಹೊಳೆವ ಬಂಗಾರದ ಚೈನು!!....ಅವನ ಪ್ರೀತಿ-ಅಭಿಮಾನದ ಮಳೆಯನ್ನು ಕಂಡು ವಿಸ್ಮಿತನಾಗಿದ್ದ!!!

`ಏನಿಲ್ಲ ಮಡೀಕೋ...ಮದುವೆಗೆ ನನ್ನದೊಂದು ಸಣ್ಣ ಮುಯ್ಯಿ ಅಷ್ಟೇಯ' ಎಂದ ಶಂಕ್ರೂವಿನ ಅಕ್ಕರೆ ತುಂಬಿದ ಮಾತುಗಳನ್ನು ಕೇಳಿ ಅವನು ನಿಜಕ್ಕೂ ಮೂಕನಾಗಿದ್ದ.

ಹೊರಬಾಗಿಲು ತೆರೆದ ಸದ್ದು ಕೇಳಿ, ಬೇಡದ ಅತಿಥಿ ತೊಲಗಿದ ಎಂಬ ನಿರಾಳತೆಯಲ್ಲಿ ತಟ್ಟನೆ ರೂಮಿನಿಂದ ಧಾವಿಸಿ ಹೊರಬಂದ ಸ್ಮಿತಾ, ಶಂಕ್ರೂ ಹೊರಟಿದ್ದನ್ನು ಕಂಡು ನಿಟ್ಟುಸಿರು ಕಕ್ಕಿದಳು.

ಸಂತಸವರಳಿದ ಮೊಗದಲ್ಲಿ ಹೊಳೆವ ಮಳೆಬಿಲ್ಲು!!..

ಚಂದನ್ ಕುಗ್ಗಿದ ದನಿಯಲ್ಲಿ-` ಊಟದ ಹೊತ್ತಾಯ್ತು...ಊಟ ಮಾಡ್ಕೊಂಡು ಹೋಗೋ ಶಂಕ್ರೂ' ಎಂದು ಎಷ್ಟು ಒತ್ತಾಯಿಸಿದರೂ, ಅವನು-`ಪರವಾಗಿಲ್ಲ ಬುಡು ಚಂದಪ್ಪ, ನಂಗೆ ಟೇಮಿಲ್ಲ...' ಎನ್ನುತ್ತ ಹಿಂತಿರುಗಿ ನೋಡಿ ಕೈಬೀಸಿದವನು , ಬಾಗಿಲಬಳಿ ಬಂದುನಿಂತ ಸ್ಮಿತಳನ್ನು ಕಂಡು ಹಲ್ಕಿರಿದು-`ಬತ್ತೀನ್ರವ್ವ...ಕಾಫೀ, ಉಪ್ಪಿಟ್ಟು ಸಾನೇ ಸೆಂದಾಕಿತ್ತು...' ಎಂದು ಮನದಾಳದಿಂದ ನುಡಿಯುತ್ತ ಗೇಟು ದಾಟಿದವನನ್ನೇ ನೋಡುತ್ತ ಚಂದನ್ ನಾಚಿಕೆಯಿಂದ ಕುಬ್ಜನಾಗಿ ನಿಂತರೆ, ಸ್ಮಿತಾ ಗಂಡನ ಕೈಯಲ್ಲಿ ಹೊಳೆಯುತ್ತಿದ್ದ ಸರವನ್ನು ಕಂಡು ದಂಗಾಗಿದ್ದಳು!

ಇದ್ದಕ್ಕಿದ್ದಂತೆ ಪಟಪಟನೆ ಹನಿಗಳುದುರುತ್ತ ಮಳೆ ಜೋರಾಗಿ ಹುಯ್ಯಲಾರಂಭಿಸಿತು. ▪

ವಿಜ್ಞಾನ

ನಿಮ್ಮ ಮಾತನ್ನು ಕೇಳುವ ನೀರು ...

ಸಂಕಲನ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ:

- ಒಣಗಿರುವ ಒಂದು ಬಾಚಣಿಗೆ
- ವಾಶ್ ಬೇಸಿನ್ ಬಳಿಯ ನಲ್ಲಿಯಲ್ಲಿ ಹರಿಯುವ ನೀರು

ವಿಧಾನ:

- ವಾಶ್ ಬೇಸಿನ್ ನಲ್ಲಿಯನ್ನು ಬಿಟ್ಟು, ಸಣ್ಣಗೆ ನೀರು ಹರಿಯುವಂತೆ ಮಾಡಿ
- ಬಾಚಣಿಗೆಯಿಂದ ನಿಮ್ಮ ತಲೆಯ ಕೂದಲನ್ನು ಎಂಟು-ಹತ್ತು ಸರ್ತಿ ಧೀರ್ಘವಾಗಿ ಬಾಚಿ
- ನಿಧಾನಕ್ಕೆ ಬಾಚಣಿಗೆಯನ್ನು ಹರಿಯುತ್ತಿರುವ ನಲ್ಲಿ ನೀರಿನ ಬಳಿ ತನ್ನಿ
- ಎಲ್ಲವೂ ಸರಿಯಾಗಿ ಮಾಡಿದರೆ, ಆ ನೀರಿನ ಹರಿವು ಬಾಚಣಿಗೆಯತ್ತ ವಾಲುತ್ತದೆ

ಏನಾಗುತ್ತಿದೆ:

ಕೂದಲನ್ನು ಬಾಚಿಕೊಂಡಾಗ, ಅದರಲ್ಲಿರುವ ಎಲೆಕ್ಟ್ರಾನ್ ಗಳು ಬಾಚಣಿಗೆಗೆ ವರ್ಗವಾಗುತ್ತವೆ. ಈ ಎಲೆಕ್ಟ್ರಾನ್ ಋಣಾತ್ಮಕ ವಿದ್ಯುದಾವೇಶವನ್ನು (ನೆಗೆಟಿವ್ ಚಾರ್ಜ್) ಹೊಂದಿರುತ್ತದೆ. ಆಯಸ್ಕಾಂತೀಯ ಸೆಳೆತದಂತೆ, ಇವು ಧನಾತ್ಮಕ (ಪಾಸಿಟಿವ್) ಅಂಶಗಳಿಂದ ಆಕರ್ಷಿಸಲ್ಪಡುತ್ತದವೆ. ನೀವು ನಲ್ಲಿ ಬಳಿ ಋಣಾತ್ಮಕ ಆವೇಶದ ಬಾಚಣಿಗೆ ತಂದಾಗ, ಇದು ನೀರಿನ ಧನಾತ್ಮಕ ಶಕ್ತಿಯಿಂದ ಆಕರ್ಷಿತವಾಗುತ್ತದೆ. ನೀರಿನ ಹರಿವು ಸಣ್ಣದಿರುವುದರಿಂದ ಆಕರ್ಷಣೆ ಸಾಧ್ಯವಾಗುತ್ತದೆ.

ಇದೇ ರೀತಿಯಲ್ಲಿ, ನೀವು ಸಣ್ಣಸಣ್ಣ ಕಾಗದ ತುಂಡುಗಳನ್ನು ಬಾಚಿದ ಬಾಚಣಿಗೆಯಿಂದ ಆಕರ್ಷಿಸಬಹುದು ▪

ಜಾಣ ಕರ್ನಾಟಕ – ಉತ್ತರ

೧. ಸರ್. ಎಂ. ವಿಶ್ವೇಶ್ವರಯ್ಯ, ಪಂಡಿತ್ ಭೀಮಸೇನ್ ಜೋಶಿ, ಡಾ. ಚಿಂತಾಮಣಿ ನಾಗೇಶ ರಾಮಚಂದ್ರ ರಾವ್ (ಸಿ. ಎನ್.ಆರ್. ರಾವ್)

೨. (ಕ್ರಮವಾಗಿ) ೧೯೫೫, ೨೦೦೮, ೨೦೧೩.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಸ್ಟೈಲ್ ಕಿಂಗ್ – ಚಲನಚಿತ್ರ

ಮೇ ೨೨, ೨೦೧೬ ಮಧ್ಯಾಹ್ನ ೦೩:೦೦ ಕ್ಕೆ

Event cinemas, Liverpool, Sydney

ಹೆಚ್ಚಿನ ಮಾಹಿತಿಗಾಗಿ ನೋಡಿ

sugamakannada@yahoo.com.au

Book by TXT Msg – Narayana – 0423634979, Nagabhushan - 0433763911

ಸಂಗೀತ ರಸಸಂಜೆ

೧೧/೦೬/೨೦೧೬ ಸಂಜೆ ೬:೦೦ ಕ್ಕೆ

ರೆಡ್ಗಮ್ ಫಂಕ್ಷನ್ ಸೆಂಟರ್, ವೆಂಟ್ವರ್ತ್‌ವಿಲ್, ಸಿಡ್ನಿ, ಆಸ್ಟ್ರೇಲಿಯ

ಹೆಚ್ಚಿನ ಮಾಹಿತಿಗೆ

ಶ್ರೀಮತಿ ಸ್ಮಿತಾ ಕರ್ಕಿ – 0481003394

ಶ್ರೀ ದಕ್ಷಿಣಮೂರ್ತಿ - 0447044787

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.